# ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖ ಪತ್ರಿಕೆ

ಸಂಪುಟ 1 ಸಂಚಿಕೆ 25 ಸೆಪ್ಟೆಂಬರ್ 2, 1979 40 ಪೈಸೆ


## ಆಡಳಿತ ಭಾಷೆ ಕನ್ನಡ

ನವಂಬರ್ ಒಂದರಿಂದ ಕರ್ನಾಟಕ ರಾಜ್ಯದಲ್ಲಿ ಕನ್ನಡ ಸರ್ವತ್ರ ಆಡಳಿತ ಭಾಷೆಯಾಗಲಿದೆಯೆಂದು ರಾಜ್ಯ ಸರಕಾರವು ಸಾರಿದೆ. ರಾಜ್ಯ ಸರಕಾರದ ಈ ಕ್ರಮವನ್ನು ಎಲ್ಲಾ ಪ್ರಗತಿಶೀಲ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಸ್ವಾಗತಿಸಬೇಕಾಗಿದೆ. "ಮಾತೃಭಾಷೆಯನ್ನೆ ಆಡಳಿತ ಭಾಷೆಯನ್ನಾಗಿಯೂ, ವಿದ್ಯಾಭ್ಯಾಸದ ಮಾಧ್ಯಮವನ್ನಾಗಿಯೂ ಮಾಡಬೇಕೆಂಬುದು" ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಮತ್ತು ಇತರ ಪ್ರಗತಿಶೀಲ ಶಕ್ತಿಗಳ ನಿಲುವೆಯಾಗಿತ್ತು. ಭಾರತ ವಿದ್ಯಾರ್ಥಿ ಫೆಡರೇಶನ್ (ಎಸ್.ಎಫ್.ಐ.) ಸಂಘಟನೆಯು ರಾಷ್ಟ್ರದಾದ್ಯಂತ ಈ ಬೇಡಿಕೆಯನ್ನು ಮುಂದಿಟ್ಟು ಒತ್ತಾಯಿಸುತ್ತಾ ಬಂದಿದೆ. "ವಿಭಿನ್ನ ಸಾಂಸ್ಕೃತಿಕ-ಭಾಷಾ"ರಾಷ್ಟ್ರೀಯತೆಗಳಿಂದ ಸೇರಿದ ಭಾರತ ದೇಶದಲ್ಲಿ, ಭಾಷಾವಾರಾಗಿ ರಾಜ್ಯಗಳ ರಚನೆಯಾದರೂ ಮಾತೃಭಾಷೆಗಳನ್ನು ಎಲ್ಲಾ ಹಂತಗಳಲ್ಲೂ ಬಳಸುವುದರಲ್ಲಿ ಪ್ರಗತಿಯಾಗಿಲ್ಲ. ಜನತೆಯು ದಿನನಿತ್ಯದ ಆಗುಹೋಗುಗಳಲ್ಲಿ ಭಾಗವಹಿಸಬೇಕಾದರೆ, ಜನತೆಗೆ ಜ್ಞಾನ, ವಿದ್ಯಾರ್ಜನೆ ಸಂಪಾದಿಸುವುದು ಸುಲಭಸಾಧ್ಯವಾಗಬೇಕಾದರೆ, ಜನತೆಯ ಸಾಂಸ್ಕೃತಿಕ ಸಾಹಿತ್ಯ ಮಟ್ಟ ಉತ್ತಮಗೊಳ್ಳುವಂತಾಗಬೇಕಾದರೆ–ಒಂದು ಮುಖ್ಯ ಅವಶ್ಯಕತೆ ಎಂದರೆ ಮಾತೃಭಾಷೆಯೆ ಎಲ್ಲಾ ಹಂತಗಳಲ್ಲೂ ಮಾಧ್ಯಮವಾಗುವುದು. ಈ ದೃಷ್ಟಿಯಿಂದ ಸರಕಾರದ ನಿರ್ಧಾರವು ಸ್ವಾಗತಾರ್ಹ.

### ಸಂಪಾದಕೀಯ

ಆದರೆ, ಕನ್ನಡ ಭಾಷೆಯನ್ನು ಆಡಳಿತ ಭಾಷೆಯನ್ನಾಗಿ ಮಾತ್ರ ಮಾಡಿದರೆ ಸಾಲದು; ವಿದ್ಯಾಭ್ಯಾಸದ ಮಾಧ್ಯಮವನ್ನಾಗಿಯೂ ಮಾಡಬೇಕು. ಹೆಚ್ಚಿನ ಜನರಿಗೆ ವಿದ್ಯಾಭ್ಯಾಸದ, ಮುಂದುವರಿದ ಜ್ಞಾನದ ಪ್ರಯೋಜನ ಸಿಗಬೇಕಾದರೆ ಇದು ಅವಶ್ಯ. ಇದೆಲ್ಲಕ್ಕಿಂತಲೂ ಮುಖ್ಯ ವಿಚಾರವೆಂದರೆ ಕರ್ನಾಟಕದಲ್ಲಿ ಕನ್ನಡಭಾಷೆಯನ್ನಾಡುವ ಜನರಲ್ಲಿ ನೂರಕ್ಕೆ 90 ರಿಂದ 75 ಮಂದಿಗೆ ಅಕ್ಷರ ಜ್ಞಾನವೇ ಇಲ್ಲದಿರುವುದು. ಈ ಪರಿಸ್ಥಿತಿಯಲ್ಲಿ ನಿರಕ್ಷರತೆಯನ್ನು ಹೋಗಲಾಡಿಸುವುದು, ಸಾರ್ವತ್ರಿಕ ವಿದ್ಯಾಭ್ಯಾಸವನ್ನು ಮಾತೃಭಾಷೆಯಲ್ಲಿ ಒದಗಿಸುವುದು–ಈ ಬಗ್ಗೆ ಕ್ರಮವಹಿಸುವುದು ಅತೀ ಅಗತ್ಯ. ಆದರೆ ಈ ಬಗ್ಗೆ ಸರಕಾರವು ಯಾವ ಕ್ರಮವನ್ನೂ ಕೈಗೊಂಡಿಲ್ಲ. ಎಲ್ಲಾ ಪ್ರಗತಿಶೀಲ ಶಕ್ತಿಗಳು ಮತ್ತು ಜನತೆ ಈ ಬಗ್ಗೆ ಒತ್ತಾಯ ಹೇರಬೇಕಾಗಿದೆ.

ಕನ್ನಡ ಆಡಳಿತ ಭಾಷೆಯನ್ನಾಗಿ ಮಾಡಿರುವುದರೊಂದಿಗೆ ಸರಕಾರವು, ಇದನ್ನು ಜಾರಿಗೊಳಿಸುವುದರ ಬಗ್ಗೆ ಸೂಕ್ತ ಕ್ರಮವನ್ನು ಅನುಸರಿಸಬೇಕು. ಕನ್ನಡ ಆಡಳಿತ ಭಾಷೆ ಎಂದಾದ ತಕ್ಷಣ ಬೇರೆ ಭಾಷೆಗಳನ್ನಾಡುವ ಜನತೆಯ ಮನದಲ್ಲಿ ತಮ್ಮ ಆಶೋತ್ತರಗಳಿಗೆ ಧಕ್ಕೆ ಬರುವುದೆಂಬ ಭಯ ಉಂಟಾಗುವುದನ್ನು ಹೋಗಲಾಡಿಸಬೇಕು. ಭಾಷೆಯ ಹೆಸರಿನಲ್ಲಿ ಸ್ಥಾಪಿತ ಹಿತಾಸಕ್ತಿಗಳು ಲಾಭ ಪಡೆಯಲು ಮುಂದಾಗದಂತೆ ಪ್ರಗತಿಶೀಲ ಶಕ್ತಿಗಳು ಜಾಗರೂಕತೆ ವಹಿಸಬೇಕು. ●

# ಜಾತ್ಯತೀತ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಒಂದಾಗಲು ಕರೆ

"ರಾಷ್ಟ್ರಪತಿಯವರು ಲೋಕಸಭೆಯನ್ನು ರದ್ದುಗೊಳಿಸಿ, ಹೊಸತಾಗಿ ಚುನಾವಣೆಯನ್ನು ನಡೆಸಲು ಆಜ್ಞೆ ಇತ್ತಿರುವುದರೊಂದಿಗೆ ಕದನದ ಒಂದು ಹಂತವು ಮುಗಿದಂತಾಗಿದೆ; ಇನ್ನೊಂದು ಪ್ರಾರಂಭವಾಗಿದೆ. ಹೊಸದಾಗಿ ಚುನಾವಣೆಗಳನ್ನು ನಡೆಸಲು ಆಜ್ಞೆ ಮಾಡುವುದರ ಮೂಲಕ ಕಳೆದ ಕೆಲವು ವಾರಗಳಲ್ಲಿ ಬೆಳೆದು ಬಂದ ರಾಜಕೀಯ ಅನಿಶ್ಚಿತತೆಯು ತಾತ್ಕಾಲಿಕವಾಗಿ ಮುಗಿದಂತಾಗಿದೆ. ದೆಹಲಿಯಲ್ಲಿನ ಬೆಳವಣಿಗೆಯು ನಮ್ಮ ರಾಜ್ಯದ ಮೇಲೂ ತೀವ್ರ ಪರಿಣಾಮ ಬೀರಿದೆ. ರಾಜ್ಯದ ಜನತಾ ಪಕ್ಷವು ಛಿದ್ರವಾಗುವುದು ಪ್ರಾರಂಭವಾಗಿದೆ. ಕಾಂಗ್ರೆಸ್ (ಐ) ಪಕ್ಷವು ಏನಾದರೂ ಮಾಡಿ ದೇವರಾಜ ಅರಸ್ ಅವರ ಸರಕಾರವನ್ನು ಉರುಳಿಸಲು ಹಠತೊಟ್ಟಿದೆ. ಎಲ್ಲಾ ಪ್ರಜಾಪ್ರಭುತ್ವವಾದಿ ಮತ್ತು ಜಾತ್ಯತೀತ ಶಕ್ತಿಗಳು ಒಂದಾಗಿ ಸರ್ವಾಧಿಕಾರ ಮತ್ತು ಕೋಮುವಾದ ಶಕ್ತಿಗಳ ವಿರುದ್ಧ ಹೋರಾಡಲು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಕರೆಯಿತ್ತಿದೆ.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಕರ್ನಾಟಕ ರಾಜ್ಯದಲ್ಲೂ ಸರ್ವಾಧಿಕಾರ ಮತ್ತು ಕೋಮುವಾದ ಶಕ್ತಿಗಳ ವಿರುದ್ಧ ಹೋರಾಡಲು ತಯಾರಿರುವ ಎಲ್ಲಾ ರಾಜಕೀಯ ಪಕ್ಷಗಳೂ, ಗುಂಪುಗಳೂ ಮತ್ತು ವ್ಯಕ್ತಿಗಳೂ ಒಗ್ಗಟ್ಟಾಗಿ ವಿಶಾಲ ತಳಹದಿಯ ರಂಗವನ್ನು ಬೆಳೆಸಲು ಮುಂದಾಗುವರು ಎಂದು ಆಶಿಸುತ್ತದೆ. ಈ ಒಗ್ಗಟ್ಟು ಕೇವಲ ಮುಂಬರುವ ಚುನಾವಣೆಗೆ ಮಾತ್ರ ಸೀಮಿತವಾಗದೆ, ಶ್ರಮಜೀವಿಗಳ ಮತ್ತು ಜನಸಾಮಾನ್ಯರ ಸಮಸ್ಯೆಗಳ ಪರಿಹಾರಕ್ಕಾಗಿಹೋರಾಡುವಂತಾಗಬೇಕೆಂದು ಸಿ.ಪಿ.ಐ.(ಎಂ) ಅಭಿಪ್ರಾಯಪಡುತ್ತದೆ. ಸಮಾನ ಅಭಿಪ್ರಾಯಗಳುಳ್ಳ ಪಕ್ಷ, ಗುಂಪು ಮತ್ತು ವ್ಯಕ್ತಿಗಳೊಡನೆ ಸಂಪರ್ಕಬೆಳೆಸಲು ಮತ್ತು ರಾಜ್ಯದಲ್ಲಿ ಸರ್ವಾಧಿಕಾರ ಮತ್ತು ಕೋಮು ಶಕ್ತಿಗಳ ವಿರುದ್ಧ ಹೋರಾಡಿ "ಜಾತ್ಯತೀತ ಮತ್ತು ಪ್ರಜಾಪ್ರಭುತ್ವ" ತಳಹದಿಯನ್ನು ಬಲಪಡಿಸಲೂ, ಶ್ರಮಜೀವಿಗಳ ಹಿತರಕ್ಷಣೆಗಾಗಿ ಹೋರಾಡಲೂ ಸಿ.ಪಿ.ಐ. (ಎಂ) ಮುಂದಾಗುವುದು. ಇಂದಿರಾ ಕಾಂಗ್ರೆಸ್ ಸರ್ವಾಧಿಕಾರ ಶಕ್ತಿಗಳು ರಾಜ್ಯದಲ್ಲಿ ಅಧಿಕಾರಕ್ಕೆ ಬರುವ ಯತ್ನವನ್ನು ಅಸಫಲಗೊಳಿಸಲು ಕರ್ನಾಟಕದ ಜನತೆಗೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಕರೆಯೀಯುತ್ತದೆ." ಎಂಬುದಾಗಿ ಪಕ್ಷದ ರಾಜ್ಯಸಮಿತಿ ಕಾರ್ಯದರ್ಶಿ ಕಾಂ. ಎಂ. ಕೆ. ಭಟ್ ಪತ್ರಿಕಾ ಹೇಳಿಕೆ ಇತ್ತಿರುವರು. ●

"ಕಾರ್ಮಿಕರು ಮತ್ತು ಅವರ ಮುಖಂಡರುಗಳು ದಾಂಡೇಲಿಯನ್ನು ಬಿಟ್ಟು ಹೋಗಲು ಆಜ್ಞೆ"

# ಡಿ. ಎಫ್. ಎ. ಕಾರ್ಮಿಕರ ಅರಣ್ಯರೋಧನ

ಉತ್ತರ ಕನ್ನಡ ಜಿಲ್ಲೆಯ ದಾಂಡೇಲಿಯ ಫೆರ್ರೊ ಅಲೋಯ್ಸ್ ಕಂಪೆನಿಯ ಮಾಲಕರು ಬೀಗಮುದ್ರೆ (ಲಾಕ್‌ಔಟ್) ಯನ್ನು ಸಾರಿ ಒಂದು ತಿಂಗಳು ಕಳೆದಿದೆ. ಸುಮಾರು ಮುನ್ನೂರು ಕಾರ್ಮಿಕರು ದುಡಿಯುವ ಈ ಕಂಪೆನಿಯಲ್ಲಿ ಕಾರ್ಮಿಕರನ್ನು ನಿಯಂತ್ರಿಸಲು ಒಂದು ನೂರು ಭದ್ರತಾ ಕಾವಲು ಜನರನ್ನು ಹೊಂದಿದ ಇದು ಕರ್ನಾಟಕದಲ್ಲೇ ಅತಿ ಹೆಚ್ಚು ಲಾಭ ಗಳಿಸುವ ಸಂಸ್ಥೆಗಳಲ್ಲಿ ಒಂದಾಗಿದೆ. ವರ್ಷಕ್ಕೆ ನಾಲ್ಕು ಕೋಟಿ ರೂಪಾಯಿಗಳ ಉತ್ಪಾದನೆ ಮಾಡುವ ಈ ಕಾರ್ಖಾನೆಯ ಕೆಲಸಗಾರರ ಪರಿಸ್ಥಿತಿಯು ಮಾತ್ರ ಶೋಚನೀಯವಾಗಿದೆ. 1960ರಲ್ಲಿ ನೂರಾರು ಕೆಲಸಗಾರರು ಮೆಂಗನೀಸ್ ವಿಷದಿಂದಲಾಗಿ ನಿಧನ ಹೊಂದಿದರೆ, ಇನ್ನೆಷ್ಟೊ ಜನರು ಅಂಗವಿಕಲರಾಗಿ ಇಂದಿಗೂ ಬಳಲುತ್ತಿದ್ದಾರೆ. ಅಂದಿನ "ಮೆಂಗನೀಸ್ ವಿಷ"ದ ಘಟನೆಯು ಇಡಿ ದೇಶದಲ್ಲಿ ಹಾಹಾಕಾರ ವೆಬ್ಬಿಸಿದ್ದೂ, ತತ್‌ಪರಿಣಾಮವಾಗಿ ಕೇಂದ್ರ ಸರಕಾರವು ಈ ಬಗ್ಗೆ ಅಭ್ಯಾಸ ನಡೆಸಿ ವರದಿಯನ್ನು ಸಲ್ಲಿಸಲು ದಿಲ್ಲಿಯಿಂದ ತಜ್ಞರ ಶಿಷ್ಟ ಮಂಡಳಿಯೊಂದನ್ನು ನೇಮಿಸಿದ್ದನ್ನೂ ಇಲ್ಲಿ ಸ್ಮರಿಸಬಹುದು.

ಆದರೆ ಕಾರ್ಮಿಕರಿಗೆ ಏನೂ ರಕ್ಷಣೆ ದೊರೆಯಲಿಲ್ಲ. ಕಳೆದ ನಾಲ್ಕು ತಿಂಗಳುಗಳಲ್ಲಿ ಮೂರು ಜನ ಕೆಲಸಗಾರರು ನಿಗೂಢ ರೋಗಕ್ಕೆ (ಮೆಂಗನೀಸ್ ವಿಷತಾಗಿದ್ದರಿಂದ ಇರಬಹುದು) ಮತ್ತೆ ಬಲಿಯಾಗಿದ್ದಾರೆ. ಇನ್ನು ಹಲವಾರು ಕೆಲಸಗಾರರು ಈ ರೋಗಕ್ಕೆ ತುತ್ತಾಗಿ ಬಳಲುತ್ತಿದ್ದಾರೆ. ವೈದ್ಯಕೀಯ ತಜ್ಞರಿಗೂ ಕಂಡುಹಿಡಿಯಲು ಅಸಾಧ್ಯವಾದ ಈ ರೋಗದಿಂದಾಗಿ ದಾಂಡೇಲಿಯಲ್ಲಿ ಒಂದು ಭೀತಿಯ ವಾತಾವರಣವು ನಿರ್ಮಾಣವಾಗಿದೆ. ತೀರಾ ಹೀನಾವಸ್ಥೆಯಲ್ಲಿದ್ದ ಈ ಕಾರಖಾನೆಗೆ ಕಾರ್ಮಿಕರ ಆರೋಗ್ಯದ ದೃಷ್ಟಿಯಿಂದ ಕೆಲವೊಂದು ತುರ್ತು ಕ್ರಮಗಳನ್ನೂ, ದುಸ್ತಿಯನ್ನೂ ಕೈಗೊಳ್ಳಬೇಕೆಂದೂ, ಕೆಲಸಗಾರರಿಗೆ ವಿಶೇಷ ಕೆಂಟೀನ್ ಸವಲತ್ತು, ಕೃತ್ರಿಮ ಶ್ವಾಸೋಚ್ಛ್ವಾಸದ ಸಾಧನಗಳನ್ನು ಒದಗಿಸುವುದು ಮೊದಲಾದವುಗಳ ಬಗ್ಗೆ ಸರಕಾರವು 1976 ರಲ್ಲಿ ಕೈಗಾರಿಕಾ ಕಾಯ್ದೆಗೆ ತಿದ್ದುಪಡಿಯನ್ನು ತಂದಿದೆ. ಕಾಯ್ದೆಯನ್ನು ಜಾರಿಮಾಡುವಂತೆ ಚೀಫ್ ಫೇಕ್ಟರಿ ಇನ್ಸ್‌ಪೆಕ್ಟರ್‌ರವರು ಈಗಾಗಲೇ ಹಲವಾರು ಸಲ ಆಡಳಿತ ವರ್ಗದವರಿಗೆ ನೋಟೀಸು ಜಾರಿ ಮಾಡಿದ್ದರೂ ಏನೂ ಪ್ರಯೋಜನವಾಗಿಲ್ಲ. ಕಾರ್ಮಿಕರು ಇಂದಿಗೂ ಮೆಂಗನೀಸ್ ವಿಷದಿಂದ ಸಾವಿಗೀಡಾಗುತ್ತಿದ್ದಾರೆ. ಕಳೆದ ಒಂದು ವರ್ಷದಿಂದ ಕಾರ್ಮಿಕರು ಈ ಬಗ್ಗೆ ಶಾಂತರೀತಿಯಿಂದ ಪ್ರತಿಭಟನೆ ನಡೆಸುತ್ತಲೇ ಬಂದಿರುತ್ತಾರೆ. ಕಾನೂನು, ಕಾಯ್ದೆಗಳನ್ನು ಭಂಗಮಾಡಿದ ಮಾಲಿಕರು ಜುಲೈಯಲ್ಲಿ ಒಂದು ಮಧ್ಯರಾತ್ರಿ ಎರಡುಗಂಟೆಗೆ ಬೀಗಮುದ್ರೆ ಸಾರಿದರು. ಒಳಗಿದ್ದ ಕೆಲಸಗಾರರನ್ನು ಗೂಂಡಾಗಳ ಸಹಾಯದಿಂದ ಹೊರಗೆಳೆಯಲು ಪ್ರಯತ್ನಿಸಿದರು. ಹಲವಾರು ಕೆಲಸಗಾರರು ಗಾಯಗೊಂಡರು. ಉಪಸ್ಥಿತರಿದ್ದ ಪೋಲೀಸ್ ಪಡೆಯ ಸಕಾಲದ ಮಧ್ಯಪ್ರವೇಶದಿಂದ ಪರಿಸ್ಥಿತಿಯು ವಿಕೋಪಕ್ಕೆ ಹೋಗುವುದನ್ನು ತಡೆಯುವುದು ಸಾಧ್ಯವಾಯಿತು.

ಇಂದಿಗೂ ಕಾರ್ಮಿಕರು ಸಂಘಹೂಡಿಲ್ಲ. ಬೀಗಮುದ್ರೆ ಇದ್ದರೂ ಅವರು ತಮ್ಮ ಕೆಲಸಕ್ಕೆ ಹಾಜರಾಗುತ್ತಿದ್ದಾರೆ. ಬೀಗಮುದ್ರೆ ತೆಗೆಯಬೇಕೆಂದೂ, ಯಥಾಪ್ರಕಾರ ಕೆಲಸಮಾಡಲು ತಾವು ಸಿದ್ಧರೆಂದೂ, "ಮೆಂಗನೀಸ್ ವಿಷ" ದಿಂದ ಆಗುವ ಹಾನಿಯನ್ನು ತಡೆಗಟ್ಟಲು ಕಾಯ್ದೆಯಂತೆ ಸೂಚಿಸಲಾದ ಕ್ರಮಗಳನ್ನು ಕೈಗೊಳ್ಳಬೇಕೆಂಬುದೂ ಕಾರ್ಮಿಕರ ತುರ್ತಿನ ಬೇಡಿಕೆಗಳಾಗಿವೆ. ಹಗಲಿರುಳು ಕೆಲಸಗಾರರ ನ್ಯಾಯವಾದ ಮುಷ್ಕರಗಳನ್ನು ಪ್ರತಿಬಂಧಿಸುವ ರಾಜ್ಯ ಸರಕಾರ ಇಂದು ಸಂಬಿಲ್ಲದೆ ಘೋಷಿಸಿದ ಲಾಕ್ ಔಟನ್ನು ಏಕೆ ಪ್ರತಿಬಂಧಿಸುವುದಿಲ್ಲ? ಈ ಮಧ್ಯೆ ಕಾರ್ಮಿಕರ ಅಧಿಕಾರಿಗಳು ಕರೆದ ಸಭೆಗಳಿಗೆ ಮಾಲಿಕರು ಸ್ವತಹ ಹಾಜರಾ

[ಕಡೆಯ ಪುಟ ನೋಡಿ]

# ಚರಣಸಿಂಗರ ಸರಕಾರಕ್ಕೆ ಬೆಂಬಲ ಕೊಡುವ ಕೇಂದ್ರ ಸಮಿತಿಯ ನಿರ್ಣಯದ ಬಗ್ಗೆ

ಜನತಾ (ಎಸ್) ಮತ್ತು ಕಾಂಗ್ರೆಸ್ (ಎಸ್) ಪಕ್ಷಗಳ ಸಮ್ಮಿಶ್ರ ಸರ್ಕಾರದ ಪರವಾಗಿ ಮತ ನೀಡಲು ಸಿ. ಪಿ. ಐ. (ಎಂ)ನ ಕೇಂದ್ರ ಸಮಿತಿ ನಿರ್ಧರಿಸಿದ್ದು, ಬೂರ್ಜ್ವಾ ಪತ್ರಿಕೆಗಳ ಕಾಲಂ ಲೇಖಕರಿಗೆ ತೀವ್ರವಾಗಿ ಟೀಕಿಸಲು ಮತ್ತು ಖಂಡಿಸಲು ವಿಷಯವಾಗಿದೆ. ಕೇಂದ್ರ ಸಮಿತಿಯ ನಿರ್ಧಾರದ ವಿರುದ್ಧದ ಈ ಸಿಟ್ಟು ಮತ್ತು ದೊಡ್ಡ ವಾರ್ತಾ ಪತ್ರಿಕೆಗಳ ಅಸಹಜ ಆಸಕ್ತಿ ನಾವು ಇದನ್ನೆಲ್ಲಾ ಪುನಃ ಪರಿಶೀಲಿಸುವಂತೆ ಮತ್ತು ಕೇಂದ್ರ ಸಮಿತಿಯ ನಿರ್ಧಾರದ ಹಿಂದಿರುವ ಸಮರ್ಥನೆಯನ್ನು ಕೊಡುವಂತೆ ಪ್ರೇರೇಪಿಸಿದೆ.

ಕೇಂದ್ರ ಸಮಿತಿಯ ನಿರ್ಧಾರವಾದರೂ ಏನಾಗಿತ್ತು ?

ಮೊದಲನೆಯದಾಗಿ, "ಸಿ. ಪಿ. ಐ. (ಎಂ) ಚರಣ್ ಮಂತ್ರಿಮಂಡಳಕ್ಕೆ ಬೆಂಬಲಕೊಡಲು ತಯಾರಾಗಿತ್ತು; ಇಂದಿರಾ ಕಾಂಗ್ರೆಸ್‌ನ ಬೆಂಬಲದಿಂದ ಅದು ಕಳಚಿಕೊಳ್ಳದಿದ್ದರೂ, ಮತ್ತು ಜನಸಮೂಹಕ್ಕೆ ಸ್ಪಷ್ಟ ಆಶ್ವಾಸನೆ ಕೊಟ್ಟಿಲ್ಲದಿದ್ದರೂ, "ಜನಸಂಘದವರೇ ಹೆಚ್ಚಿಕೊಂಡಿದ್ದ ಜನತಾಪಕ್ಷ ಅಧಿಕಾರಕ್ಕೆ ಬರುವುದನ್ನು ತಡೆಗಟ್ಟಲು ಮತ್ತು ಕಾಂಗ್ರೆಸ್ (ಐ) ಪರಿಸ್ಥಿತಿಯ ಲಾಭವನ್ನು ಪಡೆಯದಂತೆ ಮಾಡಲು."

ಎರಡನೆಯದಾಗಿ, ಸಿ. ಪಿ. ಐ. (ಎಂ) ಒಂದು ವಿರೋಧ ಪಕ್ಷವಾಗಿರುತ್ತದೆ. ಅದು ಕಾಂಗ್ರೆಸ್ (ಎಸ್) ಮತ್ತು ಜನತಾ (ಎಸ್)ನ ಮೈತ್ರಿ ಕೂಟವನ್ನು ಸೇರುವ ಪ್ರಶ್ನೆಯಾಗಲಿ, ಅಥವಾ ಚರಣ್ ಸಿಂಗ್ ಸರ್ಕಾರಕ್ಕೆ ಬೆಂಬಲಕೊಡುವ ಪ್ರಶ್ನೆಯಾಗಲಿ ಹುಟ್ಟುವುದೇ ಇಲ್ಲ."

ಮೂರನೆಯದಾಗಿ, "ಸರ್ಕಾರದ ಬಗ್ಗೆ ತನ್ನ ನಿಲುವನ್ನು ಪ್ರಕರಣದಿಂದ ಪ್ರಕರಣಕ್ಕೆ ಅದರ ನೀತಿಗಳಿಗೆ ಅನುಗುಣವಾಗಿ, ಸರ್ವಾಧಿಕಾರ ಮತ್ತು ಕೋಮುವಾದದ ವಿರುದ್ಧದ ಹೋರಾಟಗಳು ಮತ್ತು ಜನಸಮುದಾಯಕ್ಕೆ ಸಂಬಂಧಿಸಿದಂತೆ ಸಿ. ಪಿ. ಐ. (ಎಂ) ನಿರ್ಧರಿಸುತ್ತದೆ."

ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯ ವರದಿಗಾರರು ಕೇಂದ್ರ ಸಮಿತಿಯ ನಿರ್ಧಾರವನ್ನು "ಪಕ್ಷದ ತಿರುಗು-ಮುರುಗು" ಎಂದು ವಿಶ್ಲೇಷಿಸಿದರು ಮತ್ತು "ಪೊಲಿಟ್‌ಬ್ಯೂರೋದಲ್ಲಿ ತೀವ್ರ ವಿಭಜನೆಯಿದೆಯೆಂದು" ಮತ್ತು "ಪಕ್ಷವು ತನ್ನ ನಿಲುವುಗಳಿಗೆ ಅಂಟಿಕೊಂಡು, ಜನತಾ (ಎಸ್)-ಕಾಂಗ್ರೆಸ್ (ಎಸ್) ಮೈತ್ರಿಕೂಟವನ್ನು ಮತ್ತು ಜನಸಂಘದವರೇ ಹೆಚ್ಚಿಕೊಂಡ ಜನತಾ ಪಕ್ಷವನ್ನು ವಿರೋಧಿಸಬೇಕೆಂದು ಹೇಳುವ ಉಗ್ರವಾದಿಗಳು ಇದ್ದಾರೆ" ಎಂದು ಹೇಳಿದರು.

ಸ್ಟೇಟ್ಸ್‌ಮನ್ ಪತ್ರಿಕೆಯ ಸಂಪಾದಕ ಇನ್ನೂ ಒಂದು ಹೆಜ್ಜೆ ಮುಂದು ಹೋಗಿ "ಈ ನಿರ್ಧಾರದಲ್ಲಿ ಸೈದ್ಧಾಂತಿಕ ಒಲುವಿನ ಮಾತು ಹಾಗಿರಲಿ, ರಾಜಕೀಯ ತತ್ವಗಳ ಪ್ರಶ್ನೆಯೂ ಇಲ್ಲ. ಕೇವಲ ತಂತ್ರಗಳ ಕಾರಣದಿಂದ ಇದು ನಿರ್ಧಾರವಾಗಿದೆ" ಮತ್ತು "ಅವರ ವಾದಗಳು ವಿವರವಾದ ವಿಶ್ಲೇಷಣೆಗೆ ಮೀರುವ ಹಾಗೆ ಸತ್ವಾಭಾಸವಾಗಿವೆ" ಎಂದು ಹೇಳಿದ್ದಾರೆ. ಜಲಂದರ್ ಪಕ್ಷ ಸಮ್ಮೇಳನದ ನಿರ್ಧಾರವನ್ನು ಅಲ್ಲಗಳೆದಿದೆ ಎಂದು ಹೀಯಾಳಿಸುತ್ತಾ ಹೀಗೆನ್ನುತ್ತಾರೆ, "ಸಧ್ಯ ಸರ್ವಾಧಿಕಾರ ಶಕ್ತಿಯು ತೀವ್ರ ಕಂಟಕವಾಗಿ ಇದೆಯೆಂಬ ತನ್ನ ತಿಳುವಳಿಕೆಯನ್ನು ಮರೆಯಲು ಅಧಿಕಾರಕ್ಕೆ ಹವಣಿಸುತ್ತಿರುವ ಇಬ್ಬರನ್ನು ವಿರೋಧಿಸಬೇಕು ಅಥವಾ ತಟಸ್ಥವಾಗಿರಬೇಕು" ಎಂಬ ಅಭಿಪ್ರಾಯಕ್ಕೆ ಬಂದಂತಿದೆ.

'ದಿ ಹಿಂದೂ' ಪತ್ರಿಕೆಯ ಕಲ್ಕತ್ತಾದ ಪ್ರತಿನಿಧಿ ಕೇಂದ್ರ ಸಮಿತಿಯ ಒಳ ಭಿನ್ನಾಭಿಪ್ರಾಯಗಳ "ಒಳಗುಟ್ಟನ್ನು" ಈ ರೀತಿ ಬರೆದು ಪ್ರಚಾರ ಮಾಡುವುದು ಸರಿಯೆಂದು ಭಾವಿಸಿದರು.

ಪಶ್ಚಿಮ ಬಂಗಾಳದ ಎಲ್ಲಾ ಸದಸ್ಯರೂ ಜ್ಯೋತಿಬಸು ಅವರು ನವದೆಹಲಿಯಲ್ಲಿ ಇತ್ತೀಚೆಗೆ ನಡೆದ ಕೇಂದ್ರ ಸಮಿತಿಯಲ್ಲಿ ಜ್ಯೋತಿಬಸು ಅವರು ಇತ್ತೀಚಿನ ರಾಜಕೀಯ ಗಡಿಬಿಡಿಯಲ್ಲಿ ಪಕ್ಷವು ತಟಸ್ಥವಾಗಿರಬೇಕೆಂದು ಹೇಳಿದ್ದನ್ನು ಒಪ್ಪಿದ್ದಾರೆ."

ಮತ್ತು ಆತ ತನ್ನ ವರದಿಯನ್ನು ಈ ರೀತಿ ಕೊನೆಗೊಳಿಸಿದ: "ರಾಜಕೀಯವಾಗಿ ಹೇಳುವುದಾದರೆ, 10 ವರ್ಷದ ಅವಧಿಯಲ್ಲಿ ಪಕ್ಷದಲ್ಲಿ ಎದ್ದಿರುವ ಅತ್ಯಂತ ಗಹನ ಭಿನ್ನಾಭಿಪ್ರಾಯವಿದು. ಕೇಂದ್ರ ಸಮಿತಿಯ ನಿರ್ಧಾರದ ಬಗ್ಗೆ ಪಶ್ಚಿಮ ಬಂಗಾಳದ ಘಟಕದಲ್ಲಿ ಅತೀವ ಅಸಂತೋಷವಿದೆ."

ಹೀಗೆ 16 ಆಗಸ್ಟರ ಕೇಂದ್ರ ಸಮಿತಿಯ ನಿರ್ಣಯದ ಬಗ್ಗೆ ದೊಡ್ಡ ಬಂಡವಾಳಶಾಹಿಗಳ ಪತ್ರಿಕೆಗಳು ಅಪಪ್ರಚಾರ ಶುರು ಮಾಡಿದವು.

ಮೇಲೆ ಹೇಳಲಾದ ಆಸಕ್ತ ಅಪಪ್ರಚಾರವು ಸಿ. ಪಿ. ಐ. (ಎಂ)ನ ಹಿತೈಷಿಗಳನ್ನು ಮತ್ತು ಬೆಂಬಲಿಗರನ್ನು ತಪ್ಪು ದಾರಿಗೆ ಎಳೆಯುವುದರಿಂದ ವಿವರವಾದ

**ಎಮ್. ಬಸವಪುನ್ನಯ್ಯ**

ವಿವರಣೆಯನ್ನು ಕೊಡುವುದು ನಮ್ಮ ಕರ್ತವ್ಯ ಎಂದುಕೊಂಡಿದ್ದೇವೆ.

ಮುರಾರ್ಜಿ ನೇತೃತ್ವದ ಸರ್ಕಾರದ ವಿರುದ್ಧ ಅವಿಶ್ವಾಸ ನಿರ್ಣಯಕ್ಕೆ ಮತ ಹಾಕಬೇಕೆಂಬುದು ಸಿ. ಪಿ. ಐ. (ಎಂ)ನ ಪೊಲಿಟ್‌ಬ್ಯೂರೊ ಹಾಗೂ ಕೇಂದ್ರ ಸಮಿತಿಯ ಸರ್ವಾನುಮತದ ತೀರ್ಮಾನವಾಗಿತ್ತು ಎಂಬುದನ್ನು ನಾವು ಮೊದಲೇ ಸ್ಪಷ್ಟವಾಗಿ ಹೇಳಿಬಿಡಲು ಇಷ್ಟಪಡುತ್ತೇವೆ.

> ಮೊರಾರ್ಜಿ ಸರ್ಕಾರವು ಬಿದ್ದುಹೋದ ನಂತರ ಚರಣ್ ಸಿಂಗ್ ಸರ್ಕಾರವು ಅಸ್ತಿತ್ವಕ್ಕೆ ಬಂದು ಅದೂ ರಾಜೀನಾಮೆ ಕೊಟ್ಟ ಈ ಆರು ವಾರಗಳ ಅವಧಿಯು ರಾಜಕೀಯ ಬಿಕ್ಕಟ್ಟಿನ ಪರಮಾವಧಿಯ ಸಮಯವಾಗಿತ್ತು. ಈ ಸಮಯದಲ್ಲಿ ಎಲ್ಲ ರಾಜಕೀಯ ಪಕ್ಷಗಳೂ ತೀವ್ರತೆರನಾದ ಬಿಕ್ಕಟ್ಟನ್ನೇ ಎದುರಿಸಿದವು. ತನ್ನ ತತ್ವಗಳಾದ ಸರ್ವಾಧಿಕಾರಿ ವಿರೋಧ ಹಾಗೂ ಕೋಮುವಾದದ ವಿರೋಧ ಹೋರಾಟವನ್ನು ಹೆಜ್ಜೆಹೆಜ್ಜೆಗೂ ನಡೆಸಿಕೊಂಡು ಬಂದ ಒಂದೇ ಒಂದು ಪಕ್ಷವಾದ ನಮ್ಮ ಪಕ್ಷವನ್ನು "ತತ್ವಗಳಿಗೆಲ್ಲಾ ತಿಲಾಂಜಲಿ" ಕೊಟ್ಟ ಪಕ್ಷವೆಂದು ರಾಷ್ಟ್ರದ ಅನೇಕ ಬಂಡವಾಳಶಾಹಿ ಪತ್ರಿಕೆಗಳು ಅಪಪ್ರಚಾರ ಮಾಡಿದವು.
>
> ಈ 6 ವಾರಗಳ ಅವಧಿಯಲ್ಲಿ ಆದದ್ದೇನು: ನಮ್ಮ ಪಕ್ಷವು ನಡೆಸಿಕೊಂಡು ಬಂದ ಹೋರಾಟವೆಂತಹುದು ಎಂಬುದನ್ನು ಆ ಬೂರ್ಜ್ವಾ ಪತ್ರಿಕೆಗಳ ಲೇಖಕರಿಗೂ ಮತ್ತು ಜನತೆಗೂ ತಿಳಿಸುವುದು ನಮ್ಮ ಕರ್ತವ್ಯ. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪೊಲಿಟ್‌ಬ್ಯೂರೊ ಸದಸ್ಯ ಎಂ. ಬಸವಪುನ್ನಯ್ಯ ಅವರು ಇತ್ತ ಹೇಳಿಕೆಯನ್ನು ಇಲ್ಲಿ ನಮ್ಮ ವಾಚಕರಿಗೆ ಮತ್ತು ಟೀಕಾಕಾರರಿಗೆ ಕೊಡಲಾಗಿದೆ.
>
> —ಸಂ

1977ರ ಸಾರ್ವತ್ರಿಕ ಚುನಾವಣೆಯಲ್ಲಿ ಮತ್ತು ಅನಂತರ ರಾಜ್ಯಗಳಿಗೆ ನಡೆದ ಚುನಾವಣೆಗಳಲ್ಲಿ ಇಂದಿರಾ ಗಾಂಧಿಯ ತುರ್ತುಪರಿಸ್ಥಿತಿ ಆಡಳಿತೆಯನ್ನು ಕಿತ್ತೆಸೆದು ಅಧಿಕಾರಕ್ಕೆ ಬಂದ ಜನತಾಪಕ್ಷವು ಕ್ರಮೇಣವಾಗಿ ತನ್ನ ಜನಪ್ರಿಯತೆಯನ್ನು ಕಳೆದುಕೊಂಡಿತು ಮತ್ತು ಇಂದಿರಾ ನೇತೃತ್ವದ ಸರ್ವಾಧಿಕಾರಿ ಶಕ್ತಿಗಳ ವಿರುದ್ಧದ ತನ್ನ ಹೋರಾಟವನ್ನು ನಿಲ್ಲಿಸಿತು.

ತನ್ನ ವರ್ಗಗುಣದಿಂದಾಗಿ ಅನೇಕ ರಾಜ್ಯಗಳಲ್ಲಿನ ಜನತಾಪಕ್ಷದ ಸರ್ಕಾರಗಳು ಹಾಗೂ ಕೇಂದ್ರದಲ್ಲಿನ ಜನತಾ ಸರ್ಕಾರ ತೀವ್ರವಾಗಿ ಬಿಗಡಾಯಿಸುತ್ತಿದ್ದ ಆರ್ಥಿಕ ಬಿಕ್ಕಟ್ಟನ್ನು ಪರಿಹರಿಸಲಾರದೆ ಸರ್ವಾಧಿಕಾರಿ ಗುಣಗಳನ್ನು ತಾನೇ ಬೆಳೆಸಿಕೊಳ್ಳಲಾರಂಭಿಸಿತು. ಮುಷ್ಕರಗಳನ್ನು ನಿರ್ಬಂಧಿಸುವುದು, ಜನತೆಯ ಮೇಲೆ ದಬ್ಬಾಳಿಕೆ, ಮುಂಜಾಗುರುಕತಾ ಭದ್ರತಾ ಶಾಸನ ರಚನೆ, ಅಲ್ಪಸಂಖ್ಯಾತರ ಮೇಲೆ ಹಲ್ಲೆ ಹಾಗೂ ಹರಿಜನ ಗಿರಿಜನರ ಮೇಲೆ ಹಲ್ಲೆಯು ಜನತಾ ಆಳ್ವಿಕೆಯ ರಾಜ್ಯಗಳಲ್ಲಿ ದಿನನಿತ್ಯದ ಪರಿಪಾಠವಾಗಲು ಶುರುವಾಯಿತು.

ಕಾರ್ಮಿಕ ವಿರೋಧಿ ಸುಗ್ರೀವಾಜ್ಞೆಗಳನ್ನು ಕೇಂದ್ರ ಸರಕಾರವು ಜಾರಿ ಮಾಡಿದ್ದು. ಪೋಲೀಸರ ಹೋರಾಟವನ್ನು ದಮನಮಾಡಿದ್ದು ಮುಂತಾದುವುಗಳೆಲ್ಲಾ ಕೇಂದ್ರ ಸರ್ಕಾರವು ಎಷ್ಟೊಂದು ಸರ್ವಾಧಿಕಾರಿ ಗುಣಗಳನ್ನು ಬೆಳಸಿಕೊಂಡಿತು ಎಂಬುದಕ್ಕೆ ಸ್ಪಷ್ಟ ನಿದರ್ಶನ.

ಆರ್. ಎಸ್. ಎಸ್.-ಜನಸಂಘದ ಕೋಮುವಾದಿ ನೀತಿಯು ಇಂದಿರಾ ಗಾಂಧಿಯ ಸರ್ವಾಧಿಕಾರದಷ್ಟೆ ಪ್ರಚ್ಛನ್ನವಾಗಿ ಕಾಣಲು ಶುರುವಾಯಿತು. ಜನತಾಪಕ್ಷದೊಳಗಿನ ಅತಿ ದೊಡ್ಡ ಗುಂಪಾದ ಆರ್. ಎಸ್. ಎಸ್.-ಜನಸಂಘವು ತನ್ನ ದೊಡ್ಡ ಗುಂಪಿನ ಬಲವನ್ನು ಕಂಡುಕೊಂಡು ಕೇಂದ್ರ ಸರ್ಕಾರದಲ್ಲೂ ಮತ್ತು ರಾಜ್ಯಗಳಲ್ಲೂ ತನ್ನ ಪ್ರಾಭಲ್ಯವನ್ನೂ ವಿಸ್ತರಿಸಲು ಶುರು ಮಾಡಿತು.

ಆರ್. ಎಸ್. ಎಸ್.-ಜನಸಂಘವು ತನ್ನ ಪ್ರಾಭಲ್ಯವನ್ನು ಸಾಧಿಸುವ ಈ ನಿಟ್ಟಿನಲ್ಲಿ ಜನತಾಪಕ್ಷದ ಇನ್ನೊಂದು ಪ್ರಮುಖ ಘಟಕವಾದ ಬಿ. ಎಲ್. ಡಿ. ಯೊಡನೆ ಘರ್ಷಣೆಗೆ ಬಂದಿತು. ಬಿ. ಎಲ್. ಡಿ. ಯನ್ನು ಮೂಲೆಗುಂಪು ಮಾಡಿ ಜನತಾಪಕ್ಷದಲ್ಲೂ, ಕೇಂದ್ರದಲ್ಲೂ ಮತ್ತು ರಾಜ್ಯಗಳ ಮಟ್ಟದಲ್ಲೂ ತಾನು ಪ್ರಾಭಲ್ಯಕ್ಕೆ ಬರಲು ಆರ್. ಎಸ್. ಎಸ್.-ಜನಸಂಘವು ಪ್ರಧಾನಿ ಪಟ್ಟವನ್ನು ಮುಂದೊಡ್ಡಿ ಮುರಾರ್ಜಿ ದೇಸಾಯಿ-ಚರಣ್‌ಸಿಂಗ್ ಮತ್ತು ಜಗಜೀವನ್‌ರಾಮ್ ನಡುವೆ ಪಗಡೆಯಾಡಲು ಶುರುಮಾಡಿತು. ಮತ್ತು ಅದು ತನ್ನ ಪ್ರಯತ್ನದಲ್ಲಿ ಯಶಸ್ವಿಗೊಂಡು ಮುರಾರ್ಜಿ ದೇಸಾಯಿಯನ್ನು ತಾನು ಹೇಳಿದಂತೆ ಕೇಳುವ ನಾಯಕನನ್ನಾಗಿ ಮಾಡಿತು.

ರಾಜ್ಯಗಳ ಮತ್ತು ಕೇಂದ್ರ ಮಟ್ಟದಲ್ಲಿ ತಾನು ಹೊಸದಾಗಿ ಗಳಿಸಿದ್ದ ಸ್ಥಾನಗಳನ್ನು ಉಪಯೋಗಿಸಿಕೊಂಡ ಆರ್.ಎಸ್.ಎಸ್-ಜನಸಂಘವು ಜನತಾ ಪಕ್ಷದ ಮೇಲೆ ಅತ್ಯಂತ ಬಿಗಿಯಾದ ಹಿಡಿತವನ್ನು ಮತ್ತು ಪ್ರಮುಖ ಸ್ಥಾನವನ್ನು ಸಾಧಿಸಿತು.

ಆರ್.ಎಸ್.ಎಸ್. ಜನಸಂಘದ ಈ ಕ್ರಮದಿಂದಾಗಿ ಜನತಾಪಕ್ಷದ ಇತರೆ ಘಟಕ ಪಕ್ಷಗಳು ಅಸಮಾಧಾನಗೊಂಡವು. ಒಂದು ಇನ್ನೊಂದರ ಮೇಲೆ ಆರೋಪಗಳನ್ನು ಮಾಡಲಾರಂಭಿಸಿದವು. ಮುರಾರ್ಜಿ ದೇಸಾಯಿ ಚರಣ್‌ಸಿಂಗ್ ಮತ್ತು ಜಗಜೀವನ್ ರಾಮ್ ಅವರುಗಳ ನಡುವೆ ಪರಸ್ಪರ ಭ್ರಷ್ಟಾಚಾರದ ಆರೋಪಗಳನ್ನು ಮಾಡಲಾಯಿತು. ತುರ್ತು ಪರಿಸ್ಥಿತಿ ಹೇರಿದ್ದ ಸರ್ವಾಧಿಕಾರಿ ಇಂದಿರಾ ಗಾಂಧಿಯ ವಿರುದ್ಧ ಕ್ರಮ ತೆಗೆದುಕೊಳ್ಳಲೂ ಹಿಂದುಮುಂದು ನೋಡಲಾಗುತ್ತಿದೆ ಎಂಬ ಆರೋಪವೂ ಕೇಳಿಬಂತು. ಎಲ್ಲಕ್ಕಿಂತ ಮುಖ್ಯವಾಗಿ ಆರ್. ಎಸ್. ಎಸ್. ಪ್ರಕರಣವು ಅಂದರೆ ಅವರು ಆರ್.ಎಸ್.ಎಸ್. ನಲ್ಲೂ ಹಾಗೂ ಜನತಾಪಕ್ಷದಲ್ಲೂ ದ್ವಿಸದಸ್ಯತ್ವ ಹೊಂದಿರುವ ವಿಷಯವು ಜನತಾಪಕ್ಷ ಒಡೆಯುವ ಪ್ರಮುಖ ವಿಷಯವಾಗಿ ಬಂದು ನಿಂತಿತು. ಬಿ. ಎಲ್. ಡಿ., ಹಳೆಯ ಸಮಾಜವಾದಿಗಳು ಮತ್ತು ಸಿ. ಎಫ್. ಡಿ.ಯ ಒಂದು ವಿಭಾಗದವರು ಆರ್.ಎಸ್.ಎಸ್ಸಿಗರ ದ್ವಿಸದಸ್ಯತ್ವದ ಪ್ರಶ್ನೆಯು ಬಗೆಹರಿಯಲೇಬೇಕೆಂದು ಪಟ್ಟುಹಿಡಿದರು ಮತ್ತು ಇದನ್ನೇ ಒಂದು ರಾಜಕೀಯ ವೇದಿಕೆಯನ್ನಾಗಿ ಮಾಡಿಕೊಂಡರು. ಈ ನಿಟ್ಟಿನಲ್ಲಿ ಜುಲೈ 7 ಮತ್ತು 8ರಂದು ಮಧುಲಿಮಯೆ ಕರೆದಿದ್ದ ಸಮಾವೇಶವು ಮುಖ್ಯವಾದದ್ದು.

ಜನತಾ ಪಕ್ಷದಲ್ಲಿನ ಒಡಕು, ಮುರಾರ್ಜಿ ಸರ್ಕಾರದ ರಾಜೀನಾಮೆ ಮತ್ತು ಜನತಾಪಕ್ಷವನ್ನು ಆರ್. ಎಸ್. ಎಸ್. ಹಿಡಿತದ ನಾಯಕತ್ವಕ್ಕೆ ಸಂಪೂರ್ಣವಾಗಿ ವರ್ಗಾಯಿಸಿದ್ದು ಹಾಗೂ ಜನತಾಪಕ್ಷವು 1977ರ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಕೊಟ್ಟಿದ್ದ ಜಾತ್ಯತೀತ ರಾಷ್ಟ್ರದ ಭರವಸೆ ಮುರಿದದ್ದು ಮುಂತಾದವುಗಳು ಸಿ.ಪಿ.ಐ. (ಎಂ) ಅನ್ನು ಜನತಾಪಕ್ಷದ ಬಗ್ಗೆ ಮರು ವಿಮರ್ಶೆ ಮಾಡುವಂತೆ ಮಾಡಿದವು.

ತೀವ್ರವಾಗಿ ಬಿಗಡಾಯಿಸಿಕೊಳ್ಳುತ್ತಿದ್ದ ಆರ್ಥಿಕ ಬಿಕ್ಕಟ್ಟು, ಇದರಿಂದಾಗಿ ಜನಸಮೂಹದಲ್ಲಿ ಬೆಳೆಯುತ್ತಿದ್ದ ಅತೃಪ್ತಿ, ಒಂದೇ ತೆರನಾಗಿ ಬೆಳೆಯುತ್ತಲಿದ್ದ ರಾಜಕೀಯ ಅಭದ್ರತೆ, ಬೂರ್ಜ್ವ ಪಾರ್ಲಿಮೆಂಟರಿ ಪದ್ಧತಿಯ ಅಭದ್ರತೆ, ವಿಭಿನ್ನ ಬೂರ್ಜ್ವ ಪಕ್ಷಗಳ ಹಾಗೂ ಪಂಗಡಗಳ ನಡುವೆ ಅಧಿಕಾರಕ್ಕಾಗಿ ಕಚ್ಚಾಟ ಮುಂತಾದವುಗಳೆಲ್ಲಾ ಬೂರ್ಜ್ವ-ಜಮೀನ್ದಾರಿ ಪಾರ್ಟಿಯಾದ ಜನತಾ ಪಕ್ಷವು ಒಡೆಯುವುದರಲ್ಲಿ ಪರ್ಯವಸಾನವಾಯಿತು. ಅಮೆರಿಕ ಮತ್ತು ಇಂಗ್ಲೆಂಡಿನಲ್ಲಿರುವಂತೆ ಎರಡು ಪಕ್ಷಗಳ ವ್ಯವಸ್ಥೆಯು ಈ ದೇಶದಲ್ಲೂ ಹೊರ ಹೊಮ್ಮುತ್ತದೆ ಎಂದು ಪ್ರಚಾರ ಮಾಡಿದ್ದ ಬೂರ್ಜ್ವಗಳ ಲೆಕ್ಕಾಚಾರವು

[7ನೇ ಪುಟ ನೋಡಿ]

## ಆರ್ಥಿಕ ಸಮೀಕ್ಷೆ:

# ಪೆಟ್ರೋಲಿಯಂ ಪದಾರ್ಥಗಳ ಬೆಲೆ ಏರಿಕೆ - ಮತ್ತಷ್ಟೂ ಹಣದುಬ್ಬರ

—ಆರ್. ಚಂದ್ರ

ಆಗಸ್ಟ್ 18 ರಿಂದ ಪೆಟ್ರೋಲಿಯಂ ಪದಾರ್ಥಗಳ ಬೆಲೆಗಳನ್ನು ಗಣನೀಯವಾಗಿ ಹೆಚ್ಚಿಸಲು ಕೇಂದ್ರ ಸರಕಾರವು ನಿರ್ಧರಿಸಿದೆ. ಇದು ಚೌಧುರಿ ಚರಣಸಿಂಘರ ಸಮ್ಮಿಶ್ರ ಸರಕಾರವು ಸಂಸತ್ತಿನಲ್ಲಿ ವಿಶ್ವಾಸಮತ ಪಡೆಯುವ ಮುಂಚೆಯೇ ತೆಗೆದುಕೊಂಡ ಮೊತ್ತಮೊದಲ ಮಹತ್ವದ ನಿರ್ಧಾರವಾಗಿದೆ. ಕೇಂದ್ರ ಮುಂಗಡಪತ್ರದಲ್ಲಿ ಈ ಹಿಂದೆ ಚೌಧುರಿ ಸಾಹೇಬರು ಬೆಂಕಿ ಪೆಟ್ಟಿಗೆ, ಸೀಮೆಎಣ್ಣೆ, ಸಾಬೂನ್, ಬೀಡಿ, ಸಿಗರೇಟು, ಟೂತ್‌ಪೇಸ್ಟ್, ಬ್ರೆಶ್ ಮುಂತಾದ ಅವಶ್ಯಕ ಸಾಮಗ್ರಿಗಳ ಮೇಲೆ ಹೇರಿದ ವಿಪರೀತ ಕರಭಾರದಿಂದ ಬೆಲೆಗಳು ಈಗಾಗಲೇ ಗಗನಕ್ಕೇರುತ್ತಿದ್ದು, ಹಣದುಬ್ಬರದ ಬೇಗೆಯು ಜನಕೋಟಿಯನ್ನು ಭಾದಿಸುತ್ತಿದೆ. ಬೆಲೆ ನಿಯಂತ್ರಣಕ್ಕೆ ಸೂಕ್ತಕ್ರಮಕೈಗೊಳ್ಳುವುದನ್ನು ಪರಿಶೀಲಿಸಲು ಸಭೆ ಸೇರಿದ ಕೇಂದ್ರ ಮಂತ್ರಿ ಮಂಡಳಿಯು ಪೆಟ್ರೋಲಿಯಂ ಪದಾರ್ಥಗಳ ಬೆಲೆ ಏರಿಕೆಗೆ ಸಮ್ಮತಿಕೊಟ್ಟು ಮತ್ತಷ್ಟು ಹಣದುಬ್ಬರಕ್ಕೆ ಪ್ರಚೋದಿಸಿದುದು ಆಶ್ಚರ್ಯವೇ ಸರಿ. ಈ ಕೆಳಗೆ ಪ್ರಮುಖ ಪೆಟ್ರೋಲಿಯಂ ಪದಾರ್ಥಗಳ ಬೆಲೆ ಏರಿಕೆಯನ್ನು ತಿಳಿಸಲಾಗಿದೆ.

| ಪೆಟ್ರೋಲಿಯಂ ಪದಾರ್ಥಗಳು | ಬೆಲೆ ಏರಿಕೆ |
|---|---|
| ಪೆಟ್ರೋಲ್ | ಲೀಟರಿಗೆ 35 ಪೈಸೆ |
| ಸೀಮೆಎಣ್ಣೆ & ಹ್ಯಾಸ್ಪೀಡ್ ಡೀಸೆಲ್ | „ 17 ಪೈಸೆ |
| ರಾಸಾಯನಿಕ ಗೊಬ್ಬರಗಳಿಗೆ ಬಳಸುವುದನ್ನು ಬಿಟ್ಟು ಇತರ ವಿಷಯಗಳಿಗೆ ಉಪಯೋಗಿಸುವ | |
| 1) ಹಗುರ ಡೀಸೆಲ್, LSHS ಇಂಧನತೈಲ | „ 32 ಪೈಸೆ |
| 2) ನಫ್ತಾ | : 1 ಕೆ.ಜಿ.ಗೆ ರೂ. 1-47 |
| ಅಡುಗೆ ಅನಿಲ | : 15 ಕೆ.ಜಿ.ಗೆ ರೂ. 5 |
| ಇತರ ಪೆಟ್ರೋಲಿಯಂ ಪದಾರ್ಥಗಳಿಗೆ | : ಅವುಗಳ ಈಗಿನ ಮಾರಾಟ ಬೆಲೆಗಳ ಮೇಲೆ ಶೇ. 25 ರಷ್ಟು. |

ಈ ಹೆಚ್ಚಿದ ಬೆಲೆಗಳ ಮೇಲೆ ಮಾರಾಟ ತೆರಿಗೆ, ಆಕ್ಟ್ರಾಯ್ ಮತ್ತಿತರ ರಾಜ್ಯ ತೆರಿಗೆಗಳು ಸೇರಿದಾಗ ಗ್ರಾಹಕರು ಪೆಟ್ರೋಲಿಯಂ ಪದಾರ್ಥಗಳಿಗೆ ಮಾರುಕಟ್ಟೆಯಲ್ಲಿ ಇನ್ನಷ್ಟೂ ಹೆಚ್ಚು ಬೆಲೆ ತೆರಬೇಕಾಗುವುದು.

ಪಶ್ಚಿಮ ಏಷ್ಯಾದ ತೈಲೋತ್ಪಾದನಾ ದೇಶಗಳು ತಮ್ಮ ಕಚ್ಚಾತೈಲಕ್ಕೆ ಡಿಸೆಂಬರ್ '78, ಏಪ್ರಿಲ್ '79 ಮತ್ತು ಜೂನ್ '79 ಹೀಗೆ ಮೂರು ಬಾರಿ ಬೆಲೆ ಏರಿಸಿರುವುದರಿಂದ, ದೇಶದ ತೈಲ ಆಮದಿನ ವಾರ್ಷಿಕ ವೆಚ್ಚವು ರೂ. 1150 ಕೋಟಿಯಷ್ಟು ಹೆಚ್ಚಿರುವುದರಿಂದ, ಸಧ್ಯದ ಬೆಲೆ ಏರಿಕೆಯು ಅನಿವಾರ್ಯ ಎಂದು ಸರಕಾರದ ವಾದ. ಈ ಹೊಸ ಭಾರವನ್ನು ನೀಗಿಸಲು ಸಧ್ಯದ ಬೆಲೆಏರಿಕೆಯಿಂದಾಗಿ ರೂ. 870 ಕೋಟಿಯಷ್ಟು ಹೆಚ್ಚು ವಾರ್ಷಿಕ ಆದಾಯ ದೊರಕುವುದೆಂದು ಅಂದಾಜು ಮಾಡಲಾಗಿದೆ. ಕೇಂದ್ರ ಮುಂಗಡ ಪತ್ರದಲ್ಲಿ ರೂ. 280 ಕೋಟಿಯಷ್ಟು ವಾರ್ಷಿಕ ವರಮಾನ ಬರುವ ಸೀಮೆ ಎಣ್ಣೆ, ಪೆಟ್ರೋಲ್, ಹ್ಯಾಸ್ಪೀಡ್ ಡೀಸೆಲ್, LPG, ಇತ್ಯಾದಿಗಳ ಮೇಲೆ ವಿಧಿಸಿದ ಅಬಕಾರಿ ತೆರಿಗೆಯನ್ನು ರದ್ದುಗೊಳಿಸಿ ಅಷ್ಟೇ ಪ್ರಮಾಣದಲ್ಲಿ ಆ ವಸ್ತುಗಳ ಬೆಲೆಏರಿಕೆ ಎಂದೇ ಪರಿಗಣಿಸಲಾಗುವುದೆಂದು ನಿರ್ಧರಿಸಲಾಗಿದೆ. ಕೇಂದ್ರ ಮುಂಗಡ ಪತ್ರದಲ್ಲಿ ರೂ. 1330 ಕೋಟಿ ಕೊರತೆ ಹಣ ಸೃಷ್ಟಿಯನ್ನೂ ರೂ. 680 ಕೋಟಿ ಹೊಸ ತೆರಿಗೆಗಳನ್ನೂ ಸೂಚಿಸಲಾಗಿದ್ದು, ಈಗ ಅಲ್ಪಾವಧಿಯಲ್ಲಿಯೇ ಪುನಃ ಪೆಟ್ರೋಲಿಯಂ ಪದಾರ್ಥಗಳ ಬೆಲೆಏರಿಕೆಯ ಮೂಲಕ ಒಂದೇ ನೆಗೆತಕ್ಕೆ ರೂ. 870 ಕೋಟಿ ಸಂಗ್ರಹಿಸಲು ನಿರ್ಧರಿಸಿರುವುದು ಭಾರೀ ಪ್ರಮಾಣದಲ್ಲಿ ಹಣದುಬ್ಬರಕ್ಕೆ ಕಾರಣವಾದೀತೆಂದು ಪ. ಬಂಗಾಳದ ಹಣಕಾಸು ಮಂತ್ರಿ ಡಾ. ಅಶೋಕಮಿತ್ರ ಅವರು ತಮ್ಮ ತೀವ್ರ ಪ್ರತಿಕ್ರಿಯೆ ವ್ಯಕ್ತಮಾಡಿದ್ದಾರೆ.

ಆಮದು ಮಾಡಿಕೊಳ್ಳುವ ಪೆಟ್ರೋಲಿಯಂ ಪದಾರ್ಥಗಳ ಬೆಲೆಗಳು ಇತ್ತೀಚೆಗೆ ಹೆಚ್ಚಿರುವುದೇನೋ ನಿಜ. ಆದರೆ, ಈ ಸಮಸ್ಯೆಯನ್ನು ಎದುರಿಸಲು ಅವುಗಳ ಮಾರಾಟದ ಬೆಲೆಗಳನ್ನು ಏರಿಸುವುದೊಂದೇ ಸೂಕ್ತವಾದ ಮಾರ್ಗವೆ? ಹಣದುಬ್ಬರವನ್ನು ತುರ್ತಾಗಿ ತಡೆಯಬೇಕೆಂದಿರುವಾಗ ಪೆಟ್ರೋಲಿಯಂ ಪದಾರ್ಥಗಳ ಬೆಲೆಗಳನ್ನು ಏರಿಸಿದುದು ತೀರಾ ಅನುಚಿತವಾಗಿದೆ. ಇದರಿಂದ ತಿಳಿದುಬರುವುದೇನೆಂದರೆ, ವಿದೇಶಗಳಿಂದ ಬರುವ ಒತ್ತಡಗಳನ್ನು ಸಮಸ್ಯೆಗಳನ್ನು ಸರಕಾರವು ಪರಿಹರಿಸಲು ಅಸಮರ್ಥವಾಗಿದೆ. ವಿದೇಶಿ ವಿದ್ಯಾಮಾನಗಳಿಂದ ಆಮದು ವಸ್ತುಗಳ ಬೆಲೆಏರಿಕೆಯನ್ನು ನೇರವಾಗಿ ಆರ್ಥಿಕ ವ್ಯವಸ್ಥೆಯಲ್ಲಿ ಹರಿಯಬಿಟ್ಟು ಗ್ರಾಹಕರ ಮೇಲೆ ಹೇರುವುದರಲ್ಲಿ ಏನು ಪುರುಷಾರ್ಥವಿದೆ? ಈ ಸರಳ ಕ್ರಮದಲ್ಲಿ ಆರ್ಥಿಕ ವ್ಯವಸ್ಥೆಯ ಆಡಳಿತ ಎಲ್ಲಿದೆ? ಯೋಜನಾಬದ್ಧವಾದ ಆರ್ಥಿಕ ಅಭಿವೃದ್ಧಿ ಸಾಧಿಸುವುದೆಂತು? ಬೆಲೆಏರಿಕೆಯನ್ನು ಗ್ರಾಹಕರ ಮೇಲೆ ಹೇರುವ ಕೆಲಸ ಯಾರೂ ಮಾಡಬಹುದು. ಅದನ್ನು ಜನಪ್ರಿಯ (ಅಪ್ರಿಯ?) ಸರಕಾರವೇ ಮಾಡಬೇಕೆ? ಇದರಿಂದ ಆರನೇ ಯೋಜನೆಯು ಮತ್ತೆ ತಲೆಕೆಳಗಾಗುವುದು. 1978-79ರ ಬೆಲೆಗಳ ಆಧಾರದಲ್ಲಿ ಯೋಜನೆಯ ಗಾತ್ರವನ್ನು ಹೆಚ್ಚಿಸಿ ಅಂತಿಮ ಪ್ರತಿಯನ್ನು ಈಗಾಗಲೇ ಪ್ರಧಾನಿಯವರಿಗೆ ಒಪ್ಪಿಸಲಾಗಿದೆ. ಸ್ಥಿರ ಬೆಲೆಗಳಿಲ್ಲದೆ, ನಿರಂತರ ಬೆಲೆಏರುವಿಕೆಯಿಂದ ಆರ್ಥಿಕ ಅಭಿವೃದ್ಧಿಯು ಅಸ್ತವ್ಯಸ್ತಗೊಳ್ಳುವುದಲ್ಲದೆ, ಜನಸಾಮಾನ್ಯರ ಶಕ್ತಿಯು ಕ್ಷಯಿಸುವುದು.

### ಪರ್ಯಾಯ ಮಾರ್ಗಗಳು ಮಿತವ್ಯಯ:

ಹಾಗಾದರೆ ಪರ್ಯಾಯ ಮಾರ್ಗಗಳಿಲ್ಲವೆ? ಇವೆ. ಸರಕಾರ ಮಾತ್ರ ಧೈರ್ಯದಿಂದ ಪರ್ಯಾಯ ಮಾರ್ಗಗಳನ್ನು ಅನುಸರಿಸೀತೆಂಬ ಭರವಸೆ ಇಲ್ಲ. ಮೊತ್ತಮೊದಲು, ಪೆಟ್ರೋಲಿಯಂ ಪದಾರ್ಥಗಳ ಬಳಕೆಯಲ್ಲಿ ತುಂಬಾ ಮಿತವ್ಯಯ ಮಾಡಬೇಕು. ಪ. ಏಷ್ಯಾ ದೇಶಗಳಲ್ಲಿ ಪೆಟ್ರೋಲಿಯಂ ಉತ್ಪಾದನೆ ಕಡಿಮೆಯಾಗುತ್ತಿದೆ. ಅವುಗಳ ರಾಜಕೀಯ ಆರ್ಥಿಕ ಕಾರಣಗಳಿಂದ ಬೆಲೆಗಳು ಏರುತ್ತಿವೆ. ಆದುದರಿಂದ ನಮ್ಮ ದೇಶವು ಪೆಟ್ರೋಲಿಯಂ ಉತ್ಪಾದನೆಯಲ್ಲಿ ಸ್ವಾವಲಂಬನೆ ಹೊಂದುವ ತನಕ ಅದರ ಬಳಕೆಯಲ್ಲಿ ಗಣನೀಯವಾಗಿ ಮಿತವ್ಯಯ ಮಾಡಬೇಕಾಗಿದೆ. ಆದರೆ ವಾಸ್ತವವಾಗಿ ಈಗ ಕೆಲವು ವರುಷಗಳಿಂದ ಪೆಟ್ರೋಲಿಯಂ ಬೆಲೆಗಳು ಏರುತ್ತಿರುವಂತೆಯೇ, ಅದರ ಬಳಕೆಯು ದೇಶದಲ್ಲಿ ಏರುತ್ತಲೇ ಇದೆ. ಮಿತವ್ಯಯದತ್ತ ಗಮನವನ್ನೇ ಹರಿಸಲಾಗುತ್ತಿಲ್ಲ. ಸಧ್ಯದ ಪ್ರಮಾಣದಲ್ಲಿ ಪೆಟ್ರೋಲಿಯಂ ಪದಾರ್ಥಗಳ ಬಳಕೆಯು ಮುಂದುವರಿದರೆ ಆಮದು ಮೌಲ್ಯವು ರಫ್ತುಮೌಲ್ಯಕ್ಕಿಂತ ಹೆಚ್ಚಾಗಿ ವಿದೇಶಿ ವಿನಿಮಯ ಸಂಗ್ರಹಣೆಯು ಶೀಘ್ರದಲ್ಲಿ ಕರಗುವುದರಲ್ಲಿ ಸಂಶಯವಿಲ್ಲ. ಮುಖ್ಯವಾಗಿ ಖಾಸಗಿ ಹಾಗೂ ಸಾರ್ವಜನಿಕ ಕ್ಷೇತ್ರಗಳಲ್ಲಿ ವೈಯಕ್ತಿಕ ಅನುಕೂಲಗಳಿಗೆ ಕಾರುಗಳನ್ನು ಬಳಸುವುದನ್ನು ಗಣನೀಯವಾಗಿ ಕಡಿಮೆ ಮಾಡಬೇಕು. ಒಂದು ಕಾರಿನಲ್ಲಿ ಒಬ್ಬೊಬ್ಬರೇ ಪ್ರಯಾಣ ಮಾಡುವ ಬದಲು ಮೋಟಾರು ವಾಹನಗಳಲ್ಲಿ ಹೆಚ್ಚು ಜನರು ಪ್ರಯಾಣ ಮಾಡಬಹುದು. ವಿಯಟ್ನಾಂ, ಚೀನ, ಕೊರಿಯಾ ಮುಂತಾದ ಅಭಿವೃದ್ಧಿ ಹೊಂದುತ್ತಿರುವ ಸಮಾಜವಾದಿ ರಾಷ್ಟ್ರಗಳಲ್ಲಿ ವೈಯಕ್ತಿಕ ಬಳಕೆಗೆ ಕಾರುಗಳನ್ನು ಬಳಸುವುದಕ್ಕೆ ಕಠಿಣ ನಿಯಂತ್ರಣವನ್ನು ವಿಧಿಸಲಾಗಿದ್ದು, ಸಾಮಗ್ರಿಗಳನ್ನು ಸಾಗಿಸುವ ಟ್ರಕ್ಕುಗಳಿಗೂ, ಪ್ರಯಾಣಿಕರನ್ನು ಸಾಗಿಸುವ ಮೋಟಾರು ವಾಹನಗಳಿಗೂ ಹೆಚ್ಚಿನ ಆದ್ಯತೆ ನೀಡಲಾಗಿದೆ. ಭಾರತದಂತಹ ಬಡರಾಷ್ಟ್ರದಲ್ಲಿ ಪೇಟೆಪಟ್ಟಣಗಳಲ್ಲಿ ಕಪ್ಪೆಗಳಂತೆ ಅಸಂಖ್ಯಾತ ಕಾರುಗಳು ಓಡುವುದನ್ನು ನೋಡಿದರೆ ಬಡತನ ದಾರಿದ್ರ್ಯಗಳ ಮರಳುಗಾಡಿನಲ್ಲಿ ಶ್ರೀಮಂತಿಕೆಯ ಜಲಾಶಯಗಳಿರುವಂತೆ ಭಾಸವಾಗುವುದು. ವೈಯಕ್ತಿಕ ಬಳಕೆಗೆ ಕಾರುಗಳನ್ನು ಉಪಯೋಗಿಸುವ ಬದಲು ಟ್ರಕ್ಕುಗಳಿಗೂ ಮೋಟಾರು ವಾಹನಗಳಿಗೂ ಆದ್ಯತೆ ನೀಡುವುದರಿಂದ ಪೆಟ್ರೋಲಿಯಂ ಬಳಕೆಯಲ್ಲಿ ಮಿತವ್ಯಯ ಆಗುವುದಲ್ಲದೆ, ಉದ್ಯೋಗಾವಕಾಶಗಳು ಹೆಚ್ಚುವುವು ಮತ್ತು ಆರ್ಥಿಕ ಅಭಿವೃದ್ಧಿಯೂ ತ್ವರಿತಗೊಳ್ಳುವುದು. ಉದಾಹರಣೆಗೆ, ಭಾರತದ ಜೀವವಿಮಾ ಕಾರ್ಪೊರೇಶನ್ (LIC) ಒಂದರಲ್ಲಿಯೇ 12000 ಅಧಿಕಾರಿಗಳಲ್ಲಿ ಸುಮಾರು 10,000 ಅಧಿಕಾರಿಗಳಿಗೆ ಪ್ರತಿಯೊಬ್ಬರಿಗೂ ಒಂದೊಂದು ಕಾರಿದೆ! ಈ ಕಾರುಗಳು ಜೀವವಿಮಾ ಉದ್ಯಮದ ಅಭಿವೃದ್ಧಿಗಾಗಿ ಬಳಸಬೇಕೆಂದು ಉದ್ದೇಶಿಸಲಾಗಿದ್ದರೂ, ಹೆಚ್ಚಾಗಿ ಇವುಗಳು ಖಾಸಗಿ ವಿಷಯಗಳಿಗೇ ಬಳಸಲ್ಪಡುತ್ತಿವೆ. ಇವುಗಳ ಬದಲು ಒಂದೊಂದು ಶಾಖೆಗೆ ಒಂದೊಂದು ಜೀಪು ಯಾ ಮೋಟಾರು ವ್ಯಾನು ಒದಗಿಸಿದರೆ ಉದ್ದೇಶಿತ ಉದ್ಯಮ ಅಭಿವೃದ್ಧಿಯನ್ನು ಸಾಧಿಸಬಹುದು. ಹೀಗೆ, ಪ್ರತಿಯೊಂದು ಖಾಸಗಿ ಹಾಗೂ ಸಾರ್ವಜನಿಕ ಸಂಸ್ಥೆಯಲ್ಲಿ ಕಾರುಗಳ ಬಳಕೆಯನ್ನು ಪುನರ್ವಿಮರ್ಶಿಸಬೇಕು ಮತ್ತು ಪೆಟ್ರೋಲಿಯಂ ಪದಾರ್ಥಗಳ ಬಳಕೆಯಲ್ಲಿ ಮಿತವ್ಯಯಗೊಳಿಸಬೇಕು.

### ಅಪ್ರತ್ಯಕ್ಷ ತೆರಿಗೆ ರದ್ಧತಿ:

ಎರಡನೆಯದಾಗಿ, ಪೆಟ್ರೋಲಿಯಂ ಪದಾರ್ಥಗಳ ಬೆಲೆಗಳು ಅವುಗಳ ಉತ್ಪಾದನೆಯ ಅಥವಾ ಆಮದಿನ ವೆಚ್ಚಕ್ಕನುಗುಣವಾಗಿರಬೇಕು. ಬದಲು ನಮ್ಮ ದೇಶದಲ್ಲಿ ಹೆಚ್ಚಾಗಿ ಎಲ್ಲಾ ಪೆಟ್ರೋಲಿಯಂ ಪದಾರ್ಥಗಳ ಮೇಲೆಯೂ ಸರಕಾರವು ಭಾರಿ ಪ್ರಮಾಣದಲ್ಲಿ ಅಬಕಾರಿ ತೆರಿಗೆಯನ್ನು ವಿಧಿಸಿದೆ. ಪರಿಣಾಮವಾಗಿ, ಸರಕಾರವು ತನ್ನ ಸಂಪನ್ಮೂಲಗಳಿಗಾಗಿ ಪೆಟ್ರೋಲಿಯಂ ಪದಾರ್ಥಗಳ ಬಳಕೆದಾರರಿಂದ ಅಪ್ರತ್ಯಕ್ಷ ತೆರಿಗೆಯನ್ನು ಹೇರುತ್ತಿದೆ. ನಿರಂತರವಾಗಿ ಪೆಟ್ರೋಲಿಯಂ ಬೆಲೆಗಳು ಏರುತ್ತಿರುವುದರಿಂದ ಸರಕಾರವು ತನ್ನ ಸಂಪನ್ಮೂಲಗಳಿಗೆ ಇವುಗಳ ಮೇಲೆ ಅಪ್ರತ್ಯಕ್ಷ ತೆರಿಗೆ ವಿಧಿಸುವುದನ್ನು ಇನ್ನಾದರೂ ಕೈ ಬಿಡಬೇಕು. ಪೆಟ್ರೋಲಿಯಂ ಪದಾರ್ಥಗಳ ಮೇಲೆ ವಿಧಿಸಲಾಗುತ್ತಿರುವ ಅಪ್ರತ್ಯಕ್ಷ ತೆರಿಗೆಯಿಂದ ಸಂಗ್ರಹಿಸುವ ಸಂಪನ್ಮೂಲವು ಪೆಟ್ರೋಲಿಯಂ ಉದ್ಯಮದ ಅಭಿವೃದ್ಧಿಗೇ ಸಂಪೂರ್ಣವಾಗಿ ವಿನಿಯೋಗಿಸಲಾಗುವುದೆಂಬ ಭರವಸೆ ಇಲ್ಲ. ಬದಲು, ಅದು ಸರಕಾರದ ಇತರ ವೆಚ್ಚಗಳಿಗೆ ವಿನಿಯೋಗಿಸಲ್ಪಡಬಹುದು. ಸರಕಾರವು ಎಲ್ಲಾ ಅವಶ್ಯಕ ವಸ್ತುಗಳ ಮೇಲೆ ವಿವಿಧ ಅಪ್ರತ್ಯಕ್ಷ ತೆರಿಗೆಗಳನ್ನು ವಿಧಿಸುತ್ತಿರುವುದೇ ಬೆಲೆ ಏರಿಕೆಗೆ ಮುಖ್ಯ ಕಾರಣವಾಗಿದೆ. ಸರಕಾರ ತನ್ನ ಸಂಪನ್ಮೂಲಗಳನ್ನು ಆಡಳಿತ ವೆಚ್ಚಕ್ಕೂ ಆರ್ಥಿಕ ಅಭಿವೃದ್ಧಿಗೂ ಹೆಚ್ಚು ಹೆಚ್ಚಾಗಿ ಆಸ್ತಿ ಮತ್ತು ಆದಾಯಗಳ ಮೇಲೆ ಪ್ರತ್ಯಕ್ಷ ತೆರಿಗೆಗಳ ಮೂಲಕ ಪಡೆಯಬೇಕು. ಬೆಲೆ ಏರಿಕೆ ಹಾಗೂ ಅಪ್ರತ್ಯಕ್ಷ ತೆರಿಗೆಗಳನ್ನು ವಿಧಿಸುವಾಗಲೂ ಬಡವರು ಬಳಸುವಂತಹ ಸೀಮೆ ಎಣ್ಣೆ, ಬೆಂಕಿ ಪೆಟ್ಟಿಗೆ ಮುಂತಾದ ವಸ್ತುಗಳನ್ನು ವಿನಾಯತಿಗೊಳಸಬೇಕು. ಜೀವನಾವಶ್ಯಕ ವಸ್ತುಗಳಾದ ಸೀಮೆ ಎಣ್ಣೆ ಮತ್ತು ಇತರ ಪೆಟ್ರೋಲಿಯಂ ಸಾಮಗ್ರಿಗಳನ್ನು ಸರಕಾರವು ಸಹಾಯಧನ (Subsidy) ನೀಡಿ ಕಡಿಮೆ ಬೆಲೆಗಳಲ್ಲಿ ಜನಸಾಮಾನ್ಯರಿಗೆ, ದುರ್ಬಲ ವರ್ಗದವರಿಗೆ ಸರ್ವಕಾಲದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಒದಗಿಸಿಕೊಡಬೇಕು. ಆದರೆ, ಕೇಂದ್ರದ ಈ ವರುಷದ ಮುಂಗಡ ಪತ್ರದಲ್ಲಿ ಸೂಚಿಸಿದ ತೆರಿಗೆಯಿಂದ ಮತ್ತು ಈಗ ನಿರ್ಧರಿಸಲಾದ ಬೆಲೆ ಏರಿಕೆಯಿಂದ ಸೀಮೆ ಎಣ್ಣೆಯ ಬೆಲೆ ಈಗ ಲೀಟರಿಗೆ ರೂ. 1-60 ಕ್ಕೇರಿದೆ. ಸೀಮೆ ಎಣ್ಣೆ ಮತ್ತು ಅಡುಗೆ ಅನಿಲಗಳ ಸಧ್ಯದ ಬೆಲೆ ಏರಿಕೆಯಿಂದಾಗಿ ಬಡ ಹಾಗೂ ಮಧ್ಯಮ ವರ್ಗದ ಜನರ ಮೇಲೆ ರೂ. 115 ಕೋಟಿ ಭಾರ ಬಿದ್ದಂತಾಗಿದೆ. ಇದರಿಂದಾಗಿ ಕಟ್ಟಿಗೆ, ಇದ್ದಿಲುಗಳ ಬೆಲೆಗಳೂ ಏರುವ ಸಂಭವವಿದೆ. ಬಡವರ ಉದ್ಧಾರ ಮಾಡುವ ಸರಕಾರ ಪೆಟ್ರೋಲಿಯಂ ಬೆಲೆ ಏರಿಕೆಯನ್ನು ಸೀಮೆ ಎಣ್ಣೆ ಬಳಸುವ ಮಿಲಿಯಾಂತರ ಗ್ರಾಮೀಣ ಹಾಗೂ ನಗರಗಳ ಬಡ ಜನತೆಯ ಮೇಲೆಯೂ ದಾಕ್ಷಿಣ್ಯವಿಲ್ಲದೆ ಹೇರಿತು. ಪ್ರತಿ ಒಂದು ಲೀಟರ್ ಸೀಮೆಎಣ್ಣೆಯ ಬೆಲೆಯಲ್ಲಿಯೂ ಸಾಕಷ್ಟು ಪ್ರಮಾಣದಲ್ಲಿ ಅಪ್ರತ್ಯಕ್ಷ ತೆರಿಗೆ ಇರುವುದರಿಂದ, ದೇಶದ ಬಡ ಬಾಂಧವರೂ ಸರಕಾರದ ಆಡಳಿತ ಮತ್ತು ಆರ್ಥಿಕ ಅಭಿವೃದ್ಧಿಯ ವೆಚ್ಚದ ಭಾರವನ್ನು ಹೊರಬೇಕಾಗಿದೆ. ಇಂತಹ ಕ್ರಮ ಆರ್ಥಿಕ ಅಸಮಾನತೆಯನ್ನು ಹೆಚ್ಚಿಸುವುದು.

### ಶ್ರೀಮಂತ ಗ್ರಾಹಕರಿಗೆ ಬೆಲೆಏರಿಸಲಿ:

ಮೂರನೆಯದಾಗಿ, ಪೆಟ್ರೋಲಿಯಂ ಪದಾರ್ಥಗಳ ಬೆಲೆ ಏರಿಕೆಯನ್ನು ಸಮಾಜದ ಬಲಿಷ್ಠ ವರ್ಗದ ಗ್ರಾಹಕರ ಮೇಲೆ ಹೇರಬಹುದಾಗಿತ್ತು. ಆದರೆ, ಕೇಂದ್ರಮುಂಗಡಪತ್ರದಲ್ಲಿ ವ್ಯವಸಾಯ ಯಂತ್ರೋಪಕರಣಗಳಿಗೆ ಬಳಸುವ ಪೆಟ್ರೋಲಿಯಂ ಪದಾರ್ಥಗಳಿಗೆ ಹೊಸ

[6ನೇ ಪುಟನೋಡಿ]

# ಭಾರತೀಯ ವಿದ್ಯಾರ್ಥಿ ಸಂಘಟನೆಗಳು ಹಾಗೂ ರಾಜಕೀಯ ಪ್ರಜ್ಞೆ

—ಮು. ಇಕ್‌ಬಾಲ್ ಹುಸೇನ್

1947ನೇ ಇಸವಿ ಅಗಸ್ಟ್ ತಿಂಗಳ 15ನೇ ತಾರೀಖು ಮಧ್ಯರಾತ್ರಿಯ ಸಮಯದಲ್ಲಿ ಇಬ್ಬರು ವ್ಯಕ್ತಿಗಳು ಭಾರತವನ್ನು ವಿಭಜಿಸಿದರು. ಹನ್ನೊಂದು ವರ್ಷಗಳ ಹಿಂದೆ ಒಂದೇ ವಿದ್ಯಾರ್ಥಿ ಸಂಘಟನೆಯಲ್ಲಿ ಸಕ್ರಿಯ ಪಾತ್ರಧಾರಿಗಳಾಗಿದ್ದ ಈ ವ್ಯಕ್ತಿಗಳು ಮತ್ತಾರೂ ಅಲ್ಲ, ಪಾಕಿಸ್ತಾನದ ಜನಕ ದಿವಂಗತ ಮೊಹಮ್ಮದಾಲಿ ಜಿನ್ನಾ ಹಾಗೂ ಪಂಡಿತ್ ಜವಾಹರಲಾಲ್ ನೆಹರೂ. ಲಕ್ನೋದಲ್ಲಿ ಅಖಿಲ ಭಾರತ ವಿದ್ಯಾರ್ಥಿ ಫೆಡರೇಶನ್‌ನ ಮೊದಲನೇ ಸಮ್ಮೇಳನದಲ್ಲಿ ಅಧ್ಯಕ್ಷತೆ ವಹಿಸಿದ್ದ ಜಿನ್ನಾರವರು ಜಾತೀಯತೆಯ ವಿರುದ್ಧ ಧ್ವನಿಯೆತ್ತಿದರೆ, ಸಮ್ಮೇಳನವನ್ನು ಉದ್ಘಾಟಿಸಿದ ಜವಾಹರಲಾಲ್ ನೆಹರೂರವರು, ವಿದ್ಯಾರ್ಥಿಗಳು ರಾಷ್ಟ್ರೀಯ ಹೋರಾಟದಲ್ಲಿ ಭಾಗವಹಿಸುವುದು ರಾಜಕೀಯವಲ್ಲ, ಅದು "ಪವಿತ್ರ ಕರ್ತವ್ಯ" ಎಂದು ನುಡಿದರು.

ದೇಶದ ಉತ್ಪಾದನಾ ಶಕ್ತಿಗಳು ಒಮ್ಮೆ ಹಳೆಯ ವಿದ್ಯಾಸಂಸ್ಥೆಗಳನ್ನು ಹಿಂದೊತ್ತಿದಾಗ, ಹೊಸ ವಿದ್ಯಾಸಂಸ್ಥೆಗಳು ಹಾಗೂ ಪದ್ಧತಿಗಳು ಅಸ್ತಿತ್ವಕ್ಕೆ ಬರುತ್ತವೆ. ಆದರೆ ಈ ಹೊಸ ಸಂಸ್ಥೆಗಳು ಅಸ್ತಿತ್ವಕ್ಕೆ ಬರುವಾಗ, ಅದು ಶಾಂತಿಯುತವಾಗಿ, ಪರಿಸ್ಥಿತಿಯನ್ನು ಹೊಂದಿಕೊಂಡು, ವ್ಯವಸ್ಥೆಯ ಚೌಕಟ್ಟಿನೊಳಗೇ ಬರಬೇಕೆಂದೇನೂ ಇಲ್ಲ. ಇಂದಿನ ಅನೇಕ ಜನಪ್ರಿಯ ವಿದ್ಯಾಸಂಸ್ಥೆಗಳು "ಜಾಮಿಯಾ ಮಿಲಿಯಾ ಇಸ್ಲಾಮಿಯಾ", "ಕಾಶಿ ವಿದ್ಯಾಪೀಠ", ಮತ್ತು "ಗುಜರಾತ್ ವಿದ್ಯಾಪೀಠ", ಮುಂತಾದವು, ಸರ್ಕಾರದ ಮನ್ನಣೆ, ಪ್ರೋತ್ಸಾಹಗಳಿಲ್ಲದೆ, ಶಿಕ್ಷಣ ಕ್ಷೇತ್ರದಲ್ಲಿ ಬೆಳೆದ ತೀವ್ರವಾದ ಬ್ರಿಟಿಷ್ ಸಾಮ್ರಾಜ್ಯವಾದಿ ವಿರೋಧದ, ಸ್ವದೇಶಿ ಚಳುವಳಿಯಲ್ಲಿ ಬೆಳೆದು ಬಂದುವು.

**ವಿದ್ಯಾಭ್ಯಾಸ ಪದ್ಧತಿ ಮತ್ತು ಉತ್ಪಾದನಾ ಶಕ್ತಿಗಳು :**

ಸ್ವಾತಂತ್ರ್ಯ ಚಳುವಳಿಯ ಕಾಲದಲ್ಲಿ ಕಾಂಗ್ರೆಸ್ಸಿನೊಂದಿಗೆ ಬೆಳೆದ ತೀವ್ರವಾದಿ ವಿದ್ಯಾರ್ಥಿ ಚಳುವಳಿಯ ಸಂಬಂಧ ಅಲ್ಪಕಾಲಿಕವಾಗಿತ್ತು. 1937 ರಲ್ಲಿ ಕಾಂಗ್ರೆಸ್ ಪಕ್ಷ ಮಂತ್ರಿಮಂಡಲಗಳಲ್ಲಿ ಭಾಗವಹಿಸಿದ ಮೇಲೆ, ಗಾಂಧೀಜಿಯವರು ವಿದ್ಯಾರ್ಥಿಗಳು ರಾಜಕೀಯದಲ್ಲಿ ಭಾಗವಹಿಸುವುದನ್ನು ವಿರೋಧಿಸಲಾರಂಭಿಸಿದರು. ಕಾಂಗ್ರೆಸ್ಸಿನ ಈ ನಿಲುಮೆಗೆ ಕಾರಣ ಅರ್ಥವಾಗುವಂತಹುದು. ಏಕೆಂದರೆ, ವಿದ್ಯಾಭ್ಯಾಸ ಮೂಲಭೂತವಾಗಿ ಉತ್ಪಾದನಾ ವ್ಯವಸ್ಥೆಯೊಂದಿಗೆ ಹೊಂದಿರುವ ಸಂಬಂಧವನ್ನು ತಪ್ಪಿಸುವುದಕ್ಕೆ ಸಾಧ್ಯವಿಲ್ಲ. 1930ರ ಸುಮಾರಿಗೆ ಸಮಾಜವಾದಿ ರಷಿಯಾದಲ್ಲಿ ಕಾರ್ಮಿಕವರ್ಗ ಸಾಧಿಸಿದ ಅದ್ಭುತ ಪ್ರಗತಿ ಅವರನ್ನು ಯೋಚಿಸುವಂತೆ ಮಾಡಿತ್ತು.

ರಷಿಯಾದ ಉತ್ಪಾದನಾ ಶಕ್ತಿಗಳು ಮಾಡಿದ ಮುನ್ನಡೆಯಿಂದಾಗಿ, ಎಂತಹ ಪರಿಸ್ಥಿತಿ ಉಂಟಾಯಿತೆಂದರೆ ಶಿಕ್ಷಣ ಸಂಸ್ಥೆಗಳ ಇಡೀ ರೂಪರೇಷೆಗಳನ್ನು ಬದಲಾಯಿಸುವುದು ತುಂಬಾ ಅಗತ್ಯವಾಯಿತು. ಇದಕ್ಕೆ ವ್ಯತಿರಿಕ್ತವಾಗಿ, ಭಾರತದಲ್ಲಿ ಬುದ್ಧಿಶಕ್ತಿಯ ಅಪವ್ಯಯ ಮತ್ತು ನಿರಾಶೆ ಎಷ್ಟು ಹೆಚ್ಚಾಗಿತ್ತೆಂಬುದನ್ನು ಕೆಳಗಿನ ಉದಾಹರಣೆಯಿಂದ ತಿಳಿಯಬಹುದು. ಅಲಹಾಬಾದ್ ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿಗಳ ಸಂಖ್ಯೆ 1926 ರಲ್ಲಿ 1,279 ರಿಂದ 1956ರ ವೇಳೆಗೆ 6830 ಕ್ಕೆ ಏರಿತು; ಅದೇ ಕಾಲಕ್ಕೆ ಒಬ್ಬ ಉಪಾಧ್ಯಾಯನಿಗೆ ಸರಾಸರಿ ವಿದ್ಯಾರ್ಥಿಗಳ ಸಂಖ್ಯೆ 14 ರಿಂದ 28 ಆಯಿತು. 1939 ರಿಂದ 1956ರ ಅವಧಿಯಲ್ಲಿ ಹಾಸ್ಟೆಲ್ ವ್ಯವಸ್ಥೆ 1000 ದಿಂದ 2000ಕ್ಕೆ ಏರಿತು, ಅದೇ ವೇಳೆಯಲ್ಲಿ ಹಾಸ್ಟೆಲ್ ವ್ಯವಸ್ಥೆ ಸಿಗದೆಹೋದ ವಿದ್ಯಾರ್ಥಿಗಳ ಸಂಖ್ಯೆ 1000 ದಿಂದ 5000 ಆಯಿತು. 1970ರ ಸುಮಾರಿಗೆ ಪರಿಸ್ಥಿತಿ ಎಷ್ಟು ಹದಗೆಟ್ಟಿತೆಂದರೆ, ವಿದ್ಯಾವಂತ ತರುಣರಿಗೆ ಒಳ್ಳೆಯ ಭವಿಷ್ಯವೇ ಇಲ್ಲ ಎನ್ನುವ ನಿರಾಶಾದಾಯಕ ವಾತಾವರಣ ಉಂಟಾಯಿತು. 1973ರ ಜುಲೈ ವೇಳೆಗೆ ಶೇ. 45 ರಷ್ಟು ವಿದ್ಯಾವಂತ ಯುವಜನಾಂಗ, ನಿರುದ್ಯೋಗಿಗಳಾಗಿ ಅಲೆಯಬೇಕಾಯಿತು. ಪರಿಸ್ಥಿತಿ ಈಗಲೂ ಸುಧಾರಿಸಿಲ್ಲ, ಜ್ವಾಲಾಮುಖಿಯಂತೆ ಯಾವಾಗ ಬೇಕಾದರೂ ಸ್ಫೋಟಗೊಳ್ಳಬಹುದು. ವಿದ್ಯಾರ್ಥಿಗಳು ಜಗತ್ತಿನಲ್ಲಿ ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಆಗುತ್ತಿರುವ ಬೃಹತ್ ಬದಲಾವಣೆಗಳು, ಪವಾಡ ಸದೃಶವಾದ ವೈಜ್ಞಾನಿಕ, ತಾಂತ್ರಿಕ ಹಾಗೂ ಐಹಿಕ ಸಂಪತ್ತಿನ ಮುನ್ನಡೆಯನ್ನು ಗಮನಿಸುತ್ತಿದ್ದಾರೆ. ಆದರೆ, 30 ವರ್ಷಗಳ ಕಾಂಗ್ರೆಸ್ ರಾಜ್ಯದಲ್ಲಿ, ಭಾರತದಲ್ಲಿ ಜನತೆಯನ್ನು ಬಾಧಿಸುತ್ತಿರುವ ಯಾವುದೇ ಪ್ರಮುಖ ಆರ್ಥಿಕ-ಸಾಮಾಜಿಕ ಸಮಸ್ಯೆಗಳನ್ನು ಬಗೆಹರಿಸಲು ಸಾಧ್ಯವಾಗಿಲ್ಲ. ಬದಲು, ವಿಜ್ಞಾನಿಗಳು, ಇಂಜನಿಯರುಗಳನ್ನು ಸೇರಿಸಿದಂತೆ ಮಿಲಿಯಗಟ್ಟಲೆ ವಿದ್ಯಾವಂತ ನಿರುದ್ಯೋಗಿಗಳು ನಮ್ಮ ದೇಶದಲ್ಲಿ ಹೆಚ್ಚಾಗುತ್ತಲೇ ಇದ್ದಾರೆ. ವಿಶ್ವದಲ್ಲಿ ಜನಸಂಖ್ಯೆಯ ದೃಷ್ಟಿಯಿಂದ ಎರಡನೇ ದೊಡ್ಡ ದೇಶವಾಗಿರುವ, ಭಾರತ ಇನ್ನೂ ಕೈಗಾರಿಕೆಯಲ್ಲಿ, ವ್ಯವಸಾಯದಲ್ಲಿ, ವಿದ್ಯಾಭ್ಯಾಸದಲ್ಲಿ, ಸಾಂಸ್ಕೃತಿಕವಾಗಿ ಹಾಗೂ ಸಾಮಾಜಿಕವಾಗಿ ಅತಿ ಹಿಂದುಳಿದ ರಾಷ್ಟ್ರವಾಗಿದೆ. ಈ ಅವಮಾನಕರ ಪರಿಸ್ಥಿತಿಯನ್ನು ಸಹಿಸಲಾರದೆ, ಭಾರತೀಯ ವಿದ್ಯಾರ್ಥಿಗಳು ತಮ್ಮನ್ನು ತಾವು ಸಂಘಟಿಸಿಕೊಂಡು ಹೊಸ ದಿಕ್ಕಿನತ್ತ ಮುನ್ನಡೆಯುತ್ತಿದ್ದಾರೆ. ಇಡೀ ದೇಶದ ಅವನತಿಯನ್ನು ತಡೆಯಲು ಪ್ರಯತ್ನಿಸುತ್ತಿದ್ದಾರೆ.

**ವಿದ್ಯಾರ್ಥಿ ಚಳುವಳಿ ಮತ್ತು ವರ್ಗ ಹೋರಾಟ :**

ಬದಲಾವಣೆಯನ್ನು ಬಯಸುವ ಹಾಗೂ ಹಾಲೀ ವ್ಯವಸ್ಥೆಯನ್ನೇ ಮುಂದುವರಿಸಿಕೊಂಡು ಹೋಗಲು ಬಯಸುವ ಶಕ್ತಿಗಳ ನಡುವೆ ಘರ್ಷಣೆ ನಿರಂತರವಾಗಿ ನಡೆಯುತ್ತಲೇ ಇದೆ. ಸಮಾಜದಲ್ಲಿರುವ ವರ್ಗಗಳ ಮಧ್ಯೆಯಂತೂ ಇದು ವಾಸ್ತವತೆ. ಈ ವಾಸ್ತವತೆಯ ಅರಿವು ಸಾಮೂಹಿಕವಾಗಿ ಸಮಾಜದ ಮೇಲೆ ಆದಾಗ ಸಾಮೂಹಿಕ ಚಳುವಳಿಗಳು ಬೆಳೆಯುತ್ತವೆ. ಆದ್ದರಿಂದ, ಯಾವುದೇ ವಿದ್ಯಾರ್ಥಿ ಸಂಘಟನೆಯ ಯಶಸ್ಸು ಅಥವಾ ವಿಫಲತೆಗಳು ಅದು ವಿದ್ಯಾರ್ಥಿಗಳ ಸಮಸ್ಯೆಗಳಲ್ಲಿರುವ ವರ್ಗ ಸ್ವರೂಪವನ್ನು ಗುರುತಿಸುವುದರ ಮೇಲೆ ಹಾಗೂ ಸಮಸ್ಯೆಯ ಪರಿಹಾರಕ್ಕಾಗಿ ಸಮಾಜದಲ್ಲಿರುವ ವರ್ಗದೊಂದಿಗೆ ಸಂಬಂಧವನ್ನು ಬೆಳೆಸುವ ಅಗತ್ಯವನ್ನು ತಿಳಿಯುವುದರ ಮೇಲೆ ಅವಲಂಬಿಸಿರುತ್ತದೆ. ಆದ್ದರಿಂದಲೇ, ಜನತಾಪಕ್ಷಕ್ಕೆ ನಿಷ್ಠೆಯಿಂದಿರುವ "ಅಖಿಲ ಭಾರತ ವಿದ್ಯಾರ್ಥಿ ಪರಿಷತ್" (ABVP) ಹಾಗೂ ಕಾಂಗ್ರೆಸ್ ಪಕ್ಷಕ್ಕೆ ನಿಷ್ಠೆ ತೋರುವ "ಭಾರತದ ರಾಷ್ಟ್ರೀಯ ವಿದ್ಯಾರ್ಥಿ ಸಂಘ" (NSUI) ವಿದ್ಯಾರ್ಥಿಗಳ ಸಮಸ್ಯೆಗಳ ಬಗ್ಗೆ ಧೋರಣೆಯ ಮಾತಾಡಿ ಅವರನ್ನು ದೇಶದ ರಾಜಕೀಯ ಸಮಸ್ಯೆಗಳಿಂದ ವಿಮುಖಗೊಳಿಸಲು ಯತ್ನಿಸುತ್ತಿವೆ. ಆದರೆ, ಎ. ಐ. ಎಸ್. ಎಫ್. ಮತ್ತು ಎಸ್. ಎಫ್. ಐ. ನಂತಹ ವಿದ್ಯಾರ್ಥಿ ಸಂಘಟನೆಗಳು "ವಿದ್ಯಾರ್ಥಿಗಳು ರಾಜಕೀಯದಿಂದ ದೂರವಿರಬೇಕು" ಅಥವಾ "ವಿದ್ಯಾಭ್ಯಾಸದಲ್ಲಿ ರಾಜಕೀಯ ಜ್ಞಾನ ಬೇಡ" ಎಂಬ ಪೊಳ್ಳು ಘೋಷಣೆಗಳನ್ನು ತಿರಸ್ಕರಿಸುತ್ತವೆ. ಭಾರತ ವಿದ್ಯಾರ್ಥಿ ಫೆಡರೇಶನ್‌ನಂತಹ, ಪ್ರಗತಿಪರ ವಿದ್ಯಾರ್ಥಿ ಸಂಘಟನೆ ತನ್ನ ಕಾರ್ಯಕ್ರಮದಲ್ಲಿ, ಭಾರತದ ಆಳುವ ವರ್ಗಗಳ ಬಗ್ಗೆ, ವಿದ್ಯಾಭ್ಯಾಸ ಪದ್ಧತಿಯನ್ನು ಸುಧಾರಿಸುವುದರ ಬಗ್ಗೆ ಹಾಗೂ ನಿರುದ್ಯೋಗ ಸಮಸ್ಯೆಯನ್ನು ತೊಡೆದುಹಾಕುವ ವಿಷಯದಲ್ಲಿ, ಆಳುವ ವರ್ಗಕ್ಕಿರುವ ಅಸಾಮರ್ಥ್ಯವನ್ನು ತಿಳಿಸಿರುವುದಲ್ಲದೆ, ತನ್ನ ವರ್ಗ ಪ್ರಜ್ಞೆಯನ್ನು ಸ್ಪಷ್ಟಗೊಳಿಸಿದೆ. ಈ ರೀತಿಯ ವರ್ಗ ಪ್ರಜ್ಞೆ, ವೈಜ್ಞಾನಿಕ ದೃಷ್ಟಿಕೋನ ಹಾಗೂ ಸಮಾಜದ ಬಗ್ಗೆ ವಿಶಾಲದೃಷ್ಟಿ ವಿದ್ಯಾರ್ಥಿಗಳಲ್ಲಿ ಬೆಳೆಯಬೇಕಾದರೆ ಒಂದು ನಿರ್ದಿಷ್ಟ ಕಾರ್ಯಕ್ರಮ ಅತ್ಯಗತ್ಯ. ಸರಿಯಾದ ವಿಶ್ಲೇಷಣೆಯಿಂದ ಕೂಡಿದ, ಕಾರ್ಯಕ್ರಮದಿಂದ ಮಾತ್ರ ಅತಿ ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳನ್ನು ಒಂದುಗೂಡಿಸಬಹುದು.

ಈ ರೀತಿ ವಿದ್ಯಾರ್ಥಿಗಳನ್ನು ಸಂಘಟಿಸುವಾಗ ನಾವು ಗಮನದಲ್ಲಿಟ್ಟುಕೊಳ್ಳಬೇಕಾದ ಒಂದು ಅಂಶವೆಂದರೆ, ವಿದ್ಯಾರ್ಥಿ ಚಳುವಳಿಯನ್ನೇ ಪ್ರತ್ಯೇಕ ಮಾಡಿ "ವಿದ್ಯಾರ್ಥಿ ವಿಭಾಗ"ವನ್ನಾಗಿ ಮಾಡದಿರುವುದು. ಬದಲಾಗಿ, 1974 ರಲ್ಲಿ ಕಲ್ಕತ್ತಾದಲ್ಲಿ ಸೇರಿದ್ದ ಎಸ್. ಎಫ್. ಐ. ನ ಸಮ್ಮೇಳನವನ್ನು ಉದ್ಘಾಟಿಸುತ್ತಾ ಕಾಂ. ಪಿ. ಸುಂದರಯ್ಯನವರು ಹೇಳಿದಂತೆ, "ವಿದ್ಯಾರ್ಥಿಗಳು ಕೇವಲ ತಮ್ಮ ಶಾಲಾ-ಕಾಲೇಜುಗಳ ಪ್ರವೇಶ, ಉದ್ಯೋಗದ ಸಮಸ್ಯೆ ಇತ್ಯಾದಿಗಳ ಬಗ್ಗೆ ಮಾತ್ರ ಯೋಚನೆ ಮಾಡಿದರೆ ಸಾಲದು, ಇವುಗಳಿಂದ ನಾವು ಏನನ್ನೂ ಸಾಧಿಸಲು ಸಾಧ್ಯವಿಲ್ಲ. ಈ ಬೇಡಿಕೆಗಳನ್ನು ಆಧಾರವಾಗಿಟ್ಟುಕೊಂಡು ನಾವು ವಿದ್ಯಾರ್ಥಿಗಳನ್ನು ಒಂದುಗೂಡಿಸಬಹುದಷ್ಟೆ. ಆದರೆ, ಈ ಬೇಡಿಕೆಗಳು ಈಡೇರಬೇಕಾದರೆ ಬರೀ ವಿದ್ಯಾರ್ಥಿಗಳಿಂದ ಸಾಧ್ಯವಿಲ್ಲ. ವಿದ್ಯಾರ್ಥಿಗಳು, ತಮ್ಮ ತಂದೆ, ತಾಯಿ, ಸಹೋದರ, ಸಹೋದರಿಯರ ಹೋರಾಟದಲ್ಲಿ, ವರ್ಗ ದೃಷ್ಟಿಯಿಂದ ಜೊತೆಯಾಗಿ ನಿಂತಾಗ, ರೈತ-ಕಾರ್ಮಿಕರ ಬೇಡಿಕೆಗಳಿಗೆ ಬೆಂಬಲ ಕೊಟ್ಟಾಗ ಮಾತ್ರ ಇಡೀ ವರ್ಗದ ಸಖ್ಯತೆ ಹಾಗೂ ಐಕ್ಯತೆ ಒಡಮೂಡುತ್ತದೆ, ಅಂತಹ ಒಂದು ಐಕ್ಯತೆಯಿಲ್ಲದೆ ವಿದ್ಯಾರ್ಥಿಗಳು ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಸಾಧ್ಯವಿಲ್ಲ". ಇಂತಹ ಒಂದು ಸಂಘಟನೆಗೆ ದೇಶದಲ್ಲಿ ಅನುಕೂಲಕರ ಪರಿಸ್ಥಿತಿಯಿದೆ. ಒಂದು ಕಡೆ ಸಮಾಜವಾದಿ ದೇಶಗಳು ವಿದ್ಯಾಭ್ಯಾಸ ಕ್ಷೇತ್ರದಲ್ಲಿ, ಅಲ್ಪಕಾಲದಲ್ಲಿ ಸಾಧಿಸಿದ ಪ್ರಗತಿ ಯುವಜನ, ವಿದ್ಯಾರ್ಥಿಗಳ ಗಮನ ಸೆಳೆಯುತ್ತಿದ್ದರೆ, ಮತ್ತೊಂದು ಕಡೆ ವೃದ್ಧಿಯಾಗುತ್ತಿರುವ ಬಡ ವಿದ್ಯಾರ್ಥಿಗಳಿಗೆ, ವಿದ್ಯಾಭ್ಯಾಸದ ಸವಲತ್ತುಗಳು ಹಾಗೂ ಉದ್ಯೋಗದ ಅವಕಾಶಗಳು ಕಡಿಮೆಯಾಗುತ್ತಿವೆ. ಇದರಿಂದಾಗಿ, ಪ್ರತಿ ವರ್ಷವೂ ವೃದ್ಧಿಯಾಗುತ್ತಿರುವ ವಿದ್ಯಾರ್ಥಿಗಳು ಕ್ರಾಂತಿಕಾರಿ ವಿದ್ಯಾರ್ಥಿ ಚಳುವಳಿಯತ್ತ ನೋಡುತ್ತಿದ್ದಾರೆ.

ಹಾಗಾದರೆ ಶೋಷಿತ ವರ್ಗ ಮತ್ತು ವಿದ್ಯಾರ್ಥಿ ಚಳುವಳಿಯನ್ನು ಸಂಪರ್ಕಿಸುವ ಘೋಷಣೆ ಯಾವುದು ? ಅದು ಯಾವುದೆಂದರೆ, ಮೂಲಭೂತ ವಿದ್ಯಾಭ್ಯಾಸ ಪದ್ಧತಿಯ ಬಗ್ಗೆ, ನಿರಕ್ಷರತೆಯ ನಿರ್ಮೂಲನೆಯ ಬಗ್ಗೆ ಹಾಗೂ ಸಾಮೂಹಿಕ ಶಿಕ್ಷಣದ ಬಗ್ಗೆ ಇರುವ ಸಮಸ್ಯೆಗಳು. ಇಂತಹ ಸಮಸ್ಯೆಗಳು ಬಂದಾಗ, ಬಡ ದೇಶಗಳನ್ನಾಳುವ ರಕ್ತ ಹೀರುವ ಆಳುವವರ್ಗ, ಈ ಸಮಸ್ಯೆಗಳನ್ನು ಮೂಲೆಗೆ ತಳ್ಳಿಬಿಡುತ್ತದೆ. ಆದ್ದರಿಂದ, "ಚಾರ್ ರಷ್ಯಾ" ವನ್ನು ಕುರಿತು ಹೇಳುತ್ತಾ ಲೆನಿನ್ ಹೇಳುತ್ತಾರೆ, "ಸಾಮೂಹಿಕ ಶಿಕ್ಷಣದ ಪ್ರಶ್ನೆ ಬಂದಾಗ, ರಷ್ಯಾ ದೇಶವು ಕೇವಲ ಬಡ ದೇಶವಲ್ಲ, ಇದೊಂದು ಭಿಕ್ಷುಕ ರಾಷ್ಟ್ರ. ಆದರೆ, ಶ್ರೀಮಂತ ಜಮೀನ್ದಾರರಿಂದ ಆಳಲ್ಪಡುವ ಜಮೀನ್ದಾರಿ ರಾಜ್ಯವು, ಪೋಲೀಸ್ ಇಲಾಖೆಯ ಖರ್ಚು, ಸೈನ್ಯದ ಸಂಬಳ, ಬಾಡಿಗೆಗಳು, ಸರ್ಕಾರದ ಉನ್ನತ ಹುದ್ದೆಯಲ್ಲಿರುವ ಜಮೀನ್ದಾರರ ಖರ್ಚು ಮತ್ತು ಆಡಂಬರದ ಖರ್ಚುಗಳ ಪ್ರಶ್ನೆ ಬಂದಾಗ ರಷ್ಯಾ ದೇಶವು ತುಂಬಾ "ಶ್ರೀಮಂತ" ದೇಶವಾಗಿದೆ. ಜನತೆ ಎಲ್ಲಿಯವರೆಗೆ ಎಚ್ಚೆತ್ತು ಶ್ರೀಮಂತ ಜಮೀನ್ದಾರರ ನೊಗವನ್ನು ಕಿತ್ತು ಹಾಕುವುದಿಲ್ಲವೋ, ಅಲ್ಲಿಯವರೆಗೆ ಸಾಮೂಹಿಕ ಶಿಕ್ಷಣದವಿಷಯಕ್ಕೆ ರಷ್ಯಾ ದೇಶ ಬಡ, ಬಿಕ್ಷುಕ ದೇಶವಾಗಿಯೇ ಇರುತ್ತದೆ."

**ಭಾರತದಲ್ಲಿ :**

ಇನ್ನು ಭಾರತದಲ್ಲಿರುವವಿದ್ಯಾಭ್ಯಾಸ ಪದ್ಧತಿಯ ಅವ್ಯವಸ್ಥೆಯ ಬಗ್ಗೆ ಹೇಳಬೇಕೆಂದರೆ,ವಿದ್ಯಾಭ್ಯಾಸದ ಬಗ್ಗೆ ನಡೆದ 3ನೇ ಸರ್ವೆಯ ವರದಿ ನೋಡಿದರೆ ಗೊತ್ತಾಗುತ್ತದೆ.

ವರದಿಯ ಪ್ರಕಾರ ಪ್ರೈಮರಿ ಸ್ಕೂಲಿಗೆ ಸೇರುವ ಒಂದುನೂರು ವಿದ್ಯಾರ್ಥಿಗಳಲ್ಲಿ ಸುಮಾರು 40 ಜನ ವಿದ್ಯಾರ್ಥಿಗಳು 2ನೇ ತರಗತಿಗೆ ಬರುವಾಗ ಶಾಲೆಯನ್ನು ಬಿಟ್ಟಿರುತ್ತಾರೆ, ಹಾಗೂ ಸುಮಾರು ಶೇ. 60 ರಷ್ಟು ವಿದ್ಯಾರ್ಥಿಗಳು ಐದನೇ ತರಗತಿಯನ್ನು ಮುಗಿಸುವ ಮೊದಲೇ ಶಾಲೆಯನ್ನು ಬಿಟ್ಟಿರುತ್ತಾರೆ. ಕಡ್ಡಾಯ ಶಿಕ್ಷಣ ಪದ್ಧತಿಯ ಘೋಷಣೆ ಘೋಷಣೆಯಾಗಿಯೇ ಉಳಿದಿದೆ. ಹರಿಯಾಣ ರಾಜ್ಯ, ತನ್ನ ಉದಯವಾದಂದಿನಿಂದಲೇ ಕಾನೂನಿನ ಪುಸ್ತಕಗಳಲ್ಲಿ "ಕಡ್ಡಾಯ ಶಿಕ್ಷಣ ಪದ್ಧತಿ"ಯನ್ನು ಜಾರಿಗೆ ತಂದಿದೆ. ಇದರ ಫಲಿತಾಂಶ 1975 ರ ಸರ್ವೆಯಲ್ಲಿ ತಿಳಿದು ಬಂದಿರುವುದೇನೆಂದರೆ, ಗೋರೆಗಾಂವ್ ಜಿಲ್ಲೆಯ 183 ಹಳ್ಳಿಗಳಲ್ಲಿ ಕೇವಲ ಒಬ್ಬ ಅಕ್ಷರಸ್ಥ ಮಹಿಳೆ ಕೂಡಾ ಇಲ್ಲ ಎಂಬುದು. 1976-77 ರಲ್ಲಿ ನಡೆದ ಮತ್ತೊಂದು ಸರ್ವೆಯಲ್ಲಿ ಮಹಾರಾಷ್ಟ್ರದ ಚಂದ್ರಾಪುರ ಜಿಲ್ಲೆ ಆದಿವಾಸಿಗಳಲ್ಲಿ ಶಾಲೆಗೆ ಕಳಿಸುವ ಮಕ್ಕಳ ಶೇಕಡವಾರು ಸಂಖ್ಯೆ ಪ್ರತಿ ವರ್ಷ ಇಳಿಯುತ್ತಿದೆ. ಅಲ್ಲದೆ ಅಸ್ಸಾಂ, ಮಧ್ಯಪ್ರದೇಶ, ಬಿಹಾರ ಮತ್ತು ರಾಜಾಸ್ಥಾನಗಳಲ್ಲಿ 6 ರಿಂದ 11 ವರ್ಷ ವಯಸ್ಸಿನ ಬಾಲಕರಲ್ಲಿ ಶೇ. 40ರಷ್ಟು ಬಾಲಕರು ಪ್ರೈಮರಿ ಸ್ಕೂಲಿಗೆ ಕೂಡಾ ಸೇರಿರಲಿಲ್ಲವೆಂದರೆ ನಮ್ಮ ದೇಶದ ವಿದ್ಯಾಭ್ಯಾಸ ಪದ್ಧತಿ ಯಾವ ಮಟ್ಟದಲ್ಲಿದೆ ಎಂಬುದನ್ನು ಈ ಸರ್ವೆ ವರದಿಗಳು ಸ್ಪಷ್ಟವಾಗಿ ತಿಳಿಸುತ್ತವೆ.

ಮತ್ತೆ 3ನೇ ಸರ್ವೆ ವರದಿಗೆ ಬಂದರೆ, ದೇಶದಲ್ಲಿರುವ 5.5 ಲಕ್ಷ ಹಳ್ಳಿಗಳ ಪೈಕಿ 3.5 ಲಕ್ಷ ಹಳ್ಳಿಗಳಲ್ಲಿ ಮಾತ್ರ ಪ್ರೈಮರಿ ಶಾಲೆಗಳಿವೆ, ಒಂಭತ್ತು ಹಳ್ಳಿಗಳಿಗೆ ಒಂದು ಮಾಧ್ಯ

ಮಿಕ ಶಾಲೆ ಇದೆ. ಪ್ರೈಮರಿ ಶಾಲೆಗಳಲ್ಲಿ ಮೂರನೇ ಒಂದು ಭಾಗದ ಶಾಲೆಗಳು ಕಚ್ಚಾ ಗುಡಿಸಲುಗಳಲ್ಲಿ ನಡೆಯುತ್ತವೆ. ಸುಮಾರು 28,000 ಶಾಲೆಗಳಿಗೆ ಛಾವಣಿ ಇಲ್ಲ. ಇದು 1973ರ ಪರಿಸ್ಥಿತಿ. ಇನ್ನು ವಿಶ್ವವಿದ್ಯಾಲಯಗಳ ವಿದ್ಯಾಭ್ಯಾಸ ಸೌಲಭ್ಯಗಳು ಹೆಚ್ಚು ಜನರಿಗೆ ತಲುಪುವ ಬದಲು, ಕಡಿಮೆಯಾಗುತ್ತಲೇ ಇದೆ. ಸರಕಾರಿ ಪ್ರಕಟಣೆಯ ಪ್ರಕಾರ 1971-72ರಲ್ಲಿ 3.26 ಮಿಲಿಯನ್ ವಿದ್ಯಾರ್ಥಿಗಳ ಸಂಖ್ಯೆ, 1973-74ಕ್ಕೆ 3.17ಕ್ಕೆ ಇಳಿದದ್ದಲ್ಲದೆ, 1974-75ರ ಸುಮಾರಿಗೆ ಇದು 2.94ಕ್ಕೆ ಇಳಿದಿದೆ. ಭಾರತದ ಬೂರ್ಜ್ವಾ-ಜಮೀನುದಾರರ ಸರಕಾರ ವಿದ್ಯಾಭ್ಯಾಸವನ್ನು ಹೇಗೆ ಅಲಕ್ಷಿಸಿದೆ ಎಂಬುದಕ್ಕೆ ಮೇಲಿನ ಉದಾಹರಣೆಗಳೇ ಸಾಕು. ಕೇಂದ್ರ ಸರಕಾರ ದೇಶದ ವಿದ್ಯಾಭ್ಯಾಸಕ್ಕೆ ಇಡಿಯಾಗಿ, ಅದರಲ್ಲೂ ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ಖರ್ಚು ಮಾಡುವ ಹಣ ಒಂದು ಕಡೆ ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಿದ್ದರೆ, ಮತ್ತೊಂದು ಕಡೆ ದೊಡ್ಡ ಜಮೀನುದಾರರಿಗೆ ಹಾಗೂ ಉದ್ದಿಮೆದಾರರಿಗೆ ಕೊಡುವ ಸಹಾಯಧನ ಹೆಚ್ಚಾಗುತ್ತಾ ಹೋಗುತ್ತಿದೆ.

ಜನತಾಪಕ್ಷ ಅಧಿಕಾರಕ್ಕೆ ಬಂದ ಹೊಸದರಲ್ಲಿ ಅನೇಕ ಆಶ್ವಾಸನೆ, ಭರವಸೆಗಳನ್ನು ಕೊಟ್ಟಿತ್ತು, ಅನಕ್ಷರತೆಯನ್ನು ತೊಡೆದುಹಾಕುವುದಾಗಿ ಹೇಳಿತು. ಆದರೆ 1977 ರಲ್ಲಿ ಜನತಾ ಸರಕಾರದ ಪ್ರಥಮ ಬಜೆಟ್ಟಿನಲ್ಲಿ ಶೇಕಡ 0.04 ಮಾತ್ರ. ಆದ್ದರಿಂದ ಒಂದು ಕಡೆ ನಿರಕ್ಷರತೆಯ ಶಾಪವನ್ನು ತೊಡೆದುಹಾಕಲು ಪ್ರಯತ್ನಿಸುತ್ತಿದ್ದರೆ, ಮತ್ತೊಂದು ಕಡೆ ಜಮೀನುದಾರ ವರ್ಗದವರು ಹಾಗೂ ಆಳುವ ವರ್ಗಗಳು ಇದರ ಬಗ್ಗೆ ಉದಾಸೀನತೆಯನ್ನು ಪ್ರಯತ್ನಪೂರ್ವಕವಾಗಿ ಮಾಡುತ್ತಿದ್ದಾರೆ.

**ವಿದ್ಯಾರ್ಥಿಗಳು ಮತ್ತು ರಾಜಕೀಯ**

ಇತ್ತೀಚೆಗೆ ಕೆಲವರು ಎಬ್ಬಿಸಿರುವ ಹೊಸ ಘೋಷಣೆ "ವಿದ್ಯಾರ್ಥಿಗಳಿಗೆ ರಾಜಕೀಯ ಬೇಡ" ಎಂಬುದು. ಮುಂದೆ ತಮ್ಮ ರಾಷ್ಟ್ರ ಯಾವ ದಾರಿಯಲ್ಲಿ ನಡೆಯಬೇಕಾಗಿದೆ ಎಂಬುದನ್ನು ನಿರ್ಧರಿಸಬೇಕಾಗಿರುವ ಯುವ ವಿದ್ಯಾರ್ಥಿಗಳು ತಮ್ಮ ವಿಶ್ವವಿದ್ಯಾಲಯಗಳು ಅಥವಾ ವಿದ್ಯಾಭ್ಯಾಸ ಪದ್ಧತಿ ಹೇಗಿರಬೇಕೆಂಬುದನ್ನು ನಿರ್ಧರಿಸಬೇಡವೇ ? ವಿದ್ಯಾರ್ಥಿಗಳನ್ನು ಸಂಘಟಿತರನ್ನಾಗಿ ಮಾಡಿ ಅವರ ಸಮಸ್ಯೆಗಳನ್ನು ಅವರು ಬಗೆಹರಿಸಿಕೊಳ್ಳುವಂತೆ ಮಾಡುವುದರ ಬದಲು, ಅರಾಜಕ, ಸಮಾಜ ವಿರೋಧಿ, ಭ್ರಷ್ಟಾಚಾರಿಗಳಾಗಲು ಬಿಡುವುದೇ ? ಛಾತ್ರ ಪರಿಷತ್ತಿನ (ಯುವ ಕಾಂಗ್ರೆಸ್) ಗೂಂಡಾಗಳು ಪ. ಬಂಗಾಳದಲ್ಲಿ ಇಂತಹ ಚಟುವಟಿಕೆಗಳಲ್ಲಿ ನಿರತರಾಗಿದ್ದಾಗಲೂ ಇಂತಹ ಘೋಷಣೆಯನ್ನೇ ನೀಡಿದ್ದರು. ಜನತಾ ಸರಕಾರ ಅಧಿಕಾರಕ್ಕೆ ಬಂದಮೇಲೆ, ವಿದ್ಯಾಭ್ಯಾಸ ಕ್ಷೇತ್ರದಲ್ಲಿ ಅದು ಕಾಂಗ್ರೆಸ್ ನೀತಿಯನ್ನೇ ಮುಂದುವರಿಸಿಕೊಂಡು ಹೋಗುವುದನ್ನು ಎಡ ವಿದ್ಯಾರ್ಥಿ ಸಂಘಟನೆಗಳು ಟೀಕಿ

ಮಾಡಲಾರಂಭಿಸಿದಾಕ್ಷಣ, ಆರ್. ಎಸ್. ಎಸ್. ನಿಯಂತ್ರಿತ ವಿದ್ಯಾರ್ಥಿ ಪರಿಷತ್ತು ಹೇಳುತ್ತಿರುವುದೂ ಇದನ್ನೇ. ಹಾಗಾದರೆ ವಿದ್ಯಾರ್ಥಿಗಳನ್ನು ಬೇಜವಾಬ್ದಾರಿ ಯುವಕರನ್ನಾಗಿ ಮಾಡಿ ಅವರನ್ನು ಅವರ ಪಾಡಿಗೆ ಬಿಡಲು ಸಾಧ್ಯವೇ ? ಭಾರತ ವಿದ್ಯಾರ್ಥಿ ಫೆಡರೇಶನ್ ಅಭಿಪ್ರಾಯದಲ್ಲಿ, ಜವಾಬ್ದಾರಿಯುತ ವಿದ್ಯಾರ್ಥಿ ಚಳುವಳಿಯಿಂದ ಮಾತ್ರ ವಿದ್ಯಾಭ್ಯಾಸ ಕ್ಷೇತ್ರದಲ್ಲಿ ಸಮಸ್ಯೆಗಳನ್ನು ಬಗೆಹರಿಸಲು ಸಾಧ್ಯ. ಆಗ ಮಾತ್ರ ವಿದ್ಯಾರ್ಥಿಗಳು ತಮ್ಮ ಸಮಸ್ಯೆಗಳ ಬಗ್ಗೆ ಸರಿಯಾದ ಒಂದು ತಿಳುವಳಿಕೆ ಬರುವುದಲ್ಲದೆ, ದುಡಿಯುವ ವರ್ಗದ ಸಮಸ್ಯೆಗಳ ಜೊತೆಗೆ ತಮ್ಮ ಸಮಸ್ಯೆಗಳ ಸಂಬಂಧ ಸ್ಥಾಪಿಸಿ, ಭಾರತೀಯ ಜನತೆಯ ಹೋರಾಟಕ್ಕೆ ಒಂದು ಕಾರ್ಯಸಾಧ್ಯವಿರುವ ಕಾರ್ಯಕ್ರಮ ಹಾಕಿ ಲೆನಿನ್‌ರವರು ಹೇಳಿರುವಂತೆ, "ನಿಜವಾದ ಸ್ವಾತಂತ್ರ್ಯವನ್ನು ಹಾಗೂ ನಿಜವಾದ ಶಿಕ್ಷಣವನ್ನು" ಪಡೆಯಬಹುದು.

**ರಾಜ್ಯದಲ್ಲಿ :**

ಕರ್ನಾಟಕದ ಪರಿಸ್ಥಿತಿಯಾದರೂ ರಾಷ್ಟ್ರದ ಪರಿಸ್ಥಿತಿಗಿಂತ ಭಿನ್ನವಾಗಿಲ್ಲ. ಪ್ರಾಥಮಿಕ ವಿದ್ಯಾಭ್ಯಾಸವನ್ನು ರಾಜ್ಯದಲ್ಲಿ ಸಂಪೂರ್ಣವಾಗಿ ನಿರ್ಲಕ್ಷಿಸಲಾಗಿದೆ. 1976-77 ರಲ್ಲಿ ಕರ್ನಾಟಕದಲ್ಲಿ 33,474 ಪ್ರೈಮರಿ ಸ್ಕೂಲುಗಳಿದ್ದವು. 1977-78 ರಲ್ಲಿ ಈ ಸಂಖ್ಯೆಯಲ್ಲಿ ಯಾವ ಬದಲಾವಣೆಯೂ ಆಗಲಿಲ್ಲ. ಇರುವ ಪ್ರೈಮರಿ ಶಾಲೆಗಳಲ್ಲೂ, ನಗರಗಳಲ್ಲಿ ಖಾಸಗಿಯವರದೇ ಪ್ರಾಬಲ್ಯ. ಬೆಂಗಳೂರು ಉತ್ತರದಲ್ಲಿ ಸರ್ಕಾರಿ ಪ್ರಾಥಮಿಕ ಶಾಲೆಗಳು 104 ಇದ್ದರೆ, ಖಾಸಗಿ 157 ಶಾಲೆಗಳು ಇವೆ. ಬೆಂಗಳೂರು ದಕ್ಷಿಣದಲ್ಲಿ ಸರ್ಕಾರಿ ಶಾಲೆಗಳು 146 ಇದ್ದರೆ, ಖಾಸಗಿ ಶಾಲೆಗಳು 189. ಮಂಗಳೂರಿನಲ್ಲಿ ರಾಜ್ಯದಲ್ಲಿಯೇ ಅತಿ ಹೆಚ್ಚಿನ ಖಾಸಗಿ ಶಾಲೆಗಳಿದ್ದು ಇವುಗಳ ಸಂಖ್ಯೆ 491. ಬಡತನದ ಕೂಸಾದ ನಿರಕ್ಷರತೆಯನ್ನು ಈ ಖಾಸಗಿ ಶಾಲೆಗಳಿಂದ ಹೋಗಲಾಡಿಸಲು ಸಾಧ್ಯವೇ ? ಕಷ್ಟಪಟ್ಟು ಸೇರುವ ವಿದ್ಯಾರ್ಥಿಗಳು ಸಹಾ ಒಂದು ತರಗತಿಯಿಂದ ಮತ್ತೊಂದು ತರಗತಿಗೆ ಹೋದಹಾಗೆಲ್ಲಾ ಅವರ ಸಂಖ್ಯೆ ಕಡಿಮೆಯಾಗುತ್ತಾ ಹೋಗುತ್ತಿರುವುದನ್ನು ಕೆಳಗಿನ ಸೂಚಿಯಿಂದ ತಿಳಿಯಬಹುದು.

1977-78ನೇ ವರ್ಷ

| | ಹುಡುಗರು—ಹುಡುಗಿಯರು |
|---|---|
| 1ನೇ ತರಗತಿ | 7,27,069—6,10,062 |
| 2ನೇ ತರಗತಿ | 5,13,635—3,85,510 |
| 3ನೇ ತರಗತಿ | 4,07,451—2,89,493 |
| 4ನೇ ತರಗತಿ | 3,16,909—2,13,871 |

1971 ರಿಂದ 1977ರ ವರೆಗೆ 464 ಸ್ಥಳೀಯ ಸಂಸ್ಥೆಗಳು ನಡೆಸುತ್ತಿದ್ದ ಶಾಲೆಗಳನ್ನು ಸರಕಾರದ ವಶಕ್ಕೆ ತೆಗೆದುಕೊಳ್ಳಲಾಯಿತು. ಇವುಗಳಲ್ಲಿ ಬಹುಪಾಲು ಹೈಸ್ಕೂಲುಗಳಿಗೆ ಕಟ್ಟಡಗಳೇ ಇರಲಿಲ್ಲ. ಕೆಲವು ಕಟ್ಟಡಗಳಿಗೆ 6-7 ವರ್ಷಗಳಿಂದ ರಿಪೇರಿಯೇ ಆಗಿರಲಿಲ್ಲ.

ಮೆಟ್ರಿಕ್ಯುಲೇಶನ್ ಪರೀಕ್ಷೆಗಳಲ್ಲಿ ಶೇ. 46ರಷ್ಟು ವಿದ್ಯಾರ್ಥಿಗಳು ಮಾತ್ರ ಪಾಸಾಗುತ್ತಿರುವುದನ್ನು ನೋಡಿದರೆ, ನಮ್ಮ ವಿದ್ಯಾಭ್ಯಾಸ ಪದ್ಧತಿಯ ಪೊಳ್ಳುತನ ಹಾಗೂ ಸಂಪತ್ತಿನ ವ್ಯರ್ಥತೆ ಅರಿವಾಗುತ್ತದೆ. 1977-78 ರ ಫಲಿತಾಂಶಗಳಲ್ಲಿ ಕೆಲವು ಜಿಲ್ಲೆಗಳಲ್ಲಿ ಪಾಸಾದವರು ಶೇ. 26. ಅದೇ ವರ್ಷ ಅಕ್ಟೋಬರ್ ಪರೀಕ್ಷೆಯಲ್ಲಿ ಸರಾಸರಿ ಪಾಸಾದವರ ಸಂಖ್ಯೆ 17.5. ಹರಿಜನ-ಗಿರಿಜನ ವಿದ್ಯಾರ್ಥಿಗಳಲ್ಲಿ ಪಾಸಾಗುವವರ ಸಂಖ್ಯೆ ಸರಾಸರಿಗಿಂತ ಇಳಿಯುತ್ತಿದೆ. ಇದಕ್ಕೆ ಸರಕಾರ ಕೇವಲ ಬಾಯಿಮಾತಿನ ಸಹಾನುಭೂತಿ ತೋರಿಸುತ್ತಿರುವುದೇ ಕಾರಣ. ಹರಿಜನ, ಗಿರಿಜನರ ಹಾಸ್ಟೆಲ್‌ಗಳು ಅವ್ಯವಸ್ಥೆ, ಭ್ರಷ್ಟಾಚಾರಗಳಿಗೆ ಪ್ರಸಿದ್ಧಿಯಾಗುತ್ತಿವೆ. ರಾಜ್ಯದ ಹರಿಜನ-ಗಿರಿಜನ ಹಾಸ್ಟೆಲ್‌ಗಳ ಪೈಕಿ ಆ ಹಾಸ್ಟೆಲ್‌ಗಳ ಆಡಳಿತ ಮಾತ್ರ ಕಾಲೇಜು ಆಡಳಿತದ ನಿಯಂತ್ರಣದಲ್ಲಿವೆ. ಉಳಿದ ಹಾಸ್ಟೆಲ್‌ಗಳ ಆಡಳಿತವೆಲ್ಲಾ ಖಾಸಗಿಯವರ ಕೈಯಲ್ಲಿವೆ. ಸರ್ಕಾರಿ ಶಾಲೆಗಳಿಗೆ ಮಾತ್ರ ಹೋಗಬೇಕಾಗಿರುವ ಹರಿಜನ-ಗಿರಿಜನ ವಿದ್ಯಾರ್ಥಿಗಳು 1976-77ರಲ್ಲಿ ಪಾಸಾದದ್ದು ಶೇ. 43.5. ಇದರಲ್ಲಿ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳು ಪಾಸಾದದ್ದು ಶೇ. 25 ರಷ್ಟು, ಪರಿಶಿಷ್ಟ ಬುಡಕಟ್ಟು 38% ಅದೇ ವರ್ಷ ಅಕ್ಟೋಬರ್ ಪರೀಕ್ಷೆಯಲ್ಲಿ ಈಸಂಖ್ಯೆಮತ್ತಷ್ಟು ಕುಸಿದು S. C. 12.7%, S. T. 17.5% ಆಯಿತು. ಆದರೆ ಸಂಸ್ಕೃತ ಭಾಷೆಯ ಕೆಳಕಂಡ ವಿಷಯಗಳಿಗೆ ನಡೆದ ಪರೀಕ್ಷೆಗಳಲ್ಲಿ ಪಾಸಾಗಿರುವವರ ಶೇಕಡವಾರು ಸಂಖ್ಯೆ ನೋಡಿ :

1976-77.

| ವೇಷ | ಪ. ಕುಳಿತಿದ್ದವರು | ಪಾಸು | ಶೇ. | ಪ. ಕೇಂದ್ರಗಳು |
|---|---|---|---|---|
| 1. ಪ್ರಥಮ | 134 | 128 | 97.8 | 21 |
| 2. ಪ್ರವೇಶ | 26 | 22 | 85.0 | 7 |
| 3. ಮೂಲಾ | 12 | 12 | 100.0 | 4 |
| 4. ಮಧ್ಯಮ | 3 | 00 | 0.0 | 3 |
| 5. ಉತ್ತಮ | 6 | 4 | 66.6 | 2 |

ಸತ್ತ ಸಂಸ್ಕೃತವನ್ನು ಉದ್ಧಾರ ಮಾಡಲು 130 ಹೈಯರ್ ಪ್ರೈಮರಿ ಸ್ಕೂಲುಗಳಲ್ಲಿ (1977-78) ಸಂಸ್ಕೃತವನ್ನು ವಿಷಯವನ್ನಾಗಿ ಮಾಡಲಾಯಿತು. ರಾಜ್ಯದಲ್ಲಿ 8 ಸಂಸ್ಕೃತ, 48 ವೇದ, ಹಾಗೂ 2,852 ಸಂಸ್ಕೃತ ಪಾಠಶಾಲೆಗಳು ಸರಕಾರದ ಸಹಾಯದಿಂದ ನಡೆಯುತ್ತಿವೆ. ಅಲ್ಲದೆ, 200 ಪದವೀಧರ ಶಿಕ್ಷಕರನ್ನು ಆಧ್ಯಾತ್ಮಿಕ ಶಿಕ್ಷಣಕ್ಕಾಗಿ ಮೈಸೂರಿನ ರಾಮಕೃಷ್ಣ ವಿದ್ಯಾಶಾಲೆಗೆ 77-78ರಲ್ಲಿ ಕಳಿಸಿದೆ. ಶಿಕ್ಷಣದ ಇತರ ವೆಚ್ಚಗಳಿಗೆ ಹಣವಿಲ್ಲವೆಂದು ಹೇಳುವ ಸರಕಾರ ಹಣವನ್ನು ಹೇಗೆ ಪೋಲು ಮಾಡುತ್ತಿದೆ ಎನ್ನುವುದಕ್ಕೆ ಮೇಲಿನ ಉದಾಹರಣೆಯೇ ಸಾಕು.

ಶಿಕ್ಷಣ ಕ್ಷೇತ್ರದಲ್ಲಿ ಮಠಾಧಿಪತಿಗಳು, ಕ್ರಿಶ್ಚಿಯನ್ ಮಿಶನರಿಗಳು ಮತ್ತಿತರ ಜಾತಿಯವಾದಿಗಳು ಹಾಗೂ ಶಾಲಾ-ಕಾಲೇಜುಗಳನ್ನು ಲಾಭ ದುಡಿಯುವ ಕಾರಖಾನೆಗಳನ್ನಾಗಿ ಮಾಡಿಕೊಂಡಿರುವ ಬಂಡವಾಳಶಾಹಿಗಳು ರಾಜ್ಯದ ಬಹುತೇಕ ಶಾಲಾ-ಕಾಲೇಜುಗಳನ್ನು ತಮ್ಮ ಹಿಡಿತದಲ್ಲಿಟ್ಟುಕೊಂಡಿದ್ದಾರೆ. ರಾಜ್ಯದ 268 ಕಾಲೇಜುಗಳಲ್ಲಿ ಕೇವಲ 24 ಕಾಲೇಜುಗಳು ಮಾತ್ರ ಸರಕಾರಿ. ಖಾಸಗಿ ಕಾಲೇಜುಗಳ ಶಿಕ್ಷಕರಿಗೆ ಸರಕಾರ ಶೇ. 80 ರಷ್ಟು ಸಂಬಳ ಕೊಡಬೇಕಾಗಿರುವುದರಿಂದ ಬೊಕ್ಕಸಕ್ಕೆ ವರ್ಷಕ್ಕೆ ಏಳು ಕೋಟಿ ರೂಪಾಯಿ ಖರ್ಚು ಬರುತ್ತೆ. ಆದರೆ ಖಾಸಗಿ ಸಂಸ್ಥೆಯವರಿಗೆ ತಾವು ಜನಸಾಮಾನ್ಯರ ಹಣವನ್ನು ಉಪಯೋಗಿಸುತ್ತಿದ್ದೇವೆ ಎಂಬ ಭಾವನೆಯೇ ಇಲ್ಲ. ಪ್ರತಿಯೊಂದು ಖಾಸಗಿ ವಿದ್ಯಾಸಂಸ್ಥೆಯೂ ತನ್ನ ಆಡಳಿತದಲ್ಲಿರುವ ಶಾಲಾ-ಕಾಲೇಜುಗಳನ್ನು, ಮಾಜಿ ರಾಜ, ಮಹಾರಾಜರು ತಮ್ಮ ಸಂಸ್ಥಾನಗಳನ್ನು ನಡೆಸುವಂತೆ ನಡೆಸುತ್ತಿದ್ದಾರೆ. ರಾಜ್ಯದ 16 ಎಂಜಿನಿಯರಿಂಗ್ ಕಾಲೇಜುಗಳಲ್ಲಿ 12 ಕಾಲೇಜುಗಳು ಖಾಸಗಿಯವರ ಕೈಯಲ್ಲಿವೆ, ಹಾಗೆಯೇ 34 ಬಿ. ಎಡ್. ಕಾಲೇಜುಗಳ ಪೈಕಿ 6 ರಾಜ್ಯ ಸರಕಾರ, 1 ಕೇಂದ್ರ ಸರಕಾರ ನಡೆಸುತ್ತಿದೆ. ಉಳಿದ ಕಾಲೇಜುಗಳು ಲಾಭ ಮಾಡುವುದರಲ್ಲಿ ನಿರತವಾಗಿವೆ. ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ರಾಷ್ಟ್ರೀಕರಿಸುವುದು ಬಿಟ್ಟರೆ, ಶೋಷಣೆಯನ್ನು ತಪ್ಪಿಸಲು ಬೇರೆ ದಾರಿಯೇ ಇಲ್ಲ.

ಆದರೆ, ಸದ್ಯ ಕರ್ನಾಟಕದಲ್ಲಿ ಅಸ್ತಿತ್ವದಲ್ಲಿರುವ ಶ್ರೀ ದೇವರಾಜ ಅರಸು ಸರಕಾರವಾಗಲಿ, ಮುಂದೆ ಕೇಂದ್ರದಲ್ಲಿ ಆಡಳಿತಕ್ಕೆ ಬರಬಹುದಾದ ಆಳುವ ವರ್ಗದ ಪ್ರತಿನಿಧಿಗಳ ಸರಕಾರದಿಂದಾಗಲಿ ಸಮಸ್ಯೆ ಪರಿಹಾರವಾದೀತೆಂದು ಎಣಿಸುವುದು ತಪ್ಪು. ವಿದ್ಯಾರ್ಥಿಗಳು ತಮ್ಮ ಹಕ್ಕುಗಳಿಗಾಗಿ ಹೋರಾಡುವುದರ ಜೊತೆಯಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಜಾತೀಯವಾದಿಗಳ ಹಸ್ತಕ್ಷೇಪ, ಸರ್ವಾಧಿಕಾರಿಶಕ್ತಿಗಳಿಂದ ಮೂಲಭೂತಹಕ್ಕುಗಳಲ್ಲಿ ಹಸ್ತಕ್ಷೇಪವಾಗುವುದನ್ನು ಸರ್ವರೀತಿಯಲ್ಲೂ ವಿರೋಧಿಸಬೇಕು. ರೈತ-ಕಾರ್ಮಿಕರ ಹೋರಾಟಕ್ಕೆ ಸಕ್ರಿಯವಾಗಿ ಬೆಂಬಲ ನೀಡುವುದರ ಮೂಲಕ ವರ್ಗಸಂಘರ್ಷಕ್ಕೆ ಸಹಾಯ ಮಾಡಬೇಕು. ಹೀಗಾದಾಗ ಮಾತ್ರ ವಿದ್ಯಾರ್ಥಿಗಳು ತಮ್ಮ ಪಾಲಿನ ಹಕ್ಕುಗಳನ್ನು ಪಡೆಯಬಲ್ಲರು. ●

## ಸುಳ್ಯದಲ್ಲಿ ಎಸ್.ಎಫ್.ಐ. ಶಾಖೆಯ ಉದ್ಘಾಟನೆ

ದ. ಕ. ಜಿಲ್ಲೆಯ ಸುಳ್ಯದಲ್ಲಿ ಭಾರತ ವಿದ್ಯಾರ್ಥಿ ಫೆಡರೇಷನ್ನಿನ ಶಾಖೆಯ ಉದ್ಘಾಟನೆಯು ಜಿಲ್ಲಾ ಎಸ್. ಎಫ್. ಐ. ನ ಅಧ್ಯಕ್ಷರಾದ ಕಾಂ. ರಾಘವ ಅವರ ಅಧ್ಯಕ್ಷತೆಯಲ್ಲಿ ಜರುಗಿತು. ಕಾಂ. ಉಮೇಶ್ ರಾವ್ ಅವರು ಮುಖ್ಯ ಅತಿಥಿಗಳಾಗಿ ಬಂದಿದ್ದರು. ಕಾಂ. ರಾಘವ ಅವರು ಫೆಡರೇಷನ್ನಿನ ಧ್ಯೇಯ ಧೋರಣೆಗಳ ಬಗ್ಗೆ ಮಾತನಾಡಿದರು. ನಂತರ ಸಭೆಯು ಸುಳ್ಯ ತಾಲ್ಲೂಕಿನ ವಿದ್ಯಾರ್ಥಿಗಳ ಸಮಸ್ಯೆಗಳ ಬಗ್ಗೆ ಠರಾವುಗಳನ್ನು ಅಂಗೀಕರಿಸಿತು. 31-8-79 ರಂದು ಸರ್ಕಾರಕ್ಕೆ ಸಾಮೂಹಿಕ ಮನವಿ ಅರ್ಪಿಸಲು ತೀರ್ಮಾನಿಸಲಾಯಿತು. ಸಭೆಯಲ್ಲಿ ಸುಳ್ಯ ತಾಲ್ಲೂಕು ಎಸ್. ಎಫ್. ಐ. ನ ಸಮಿತಿಯನ್ನು ಆಯ್ಕೆಮಾಡಲಾಯಿತು. ಅಧ್ಯಕ್ಷರಾಗಿ ಕಾಂ. ಎಸ್. ಎಸ್. ಅಬ್ದುಲ್ಲ ಅವರು ಪ್ರಧಾನ ಕಾರ್ಯದರ್ಶಿಯಾಗಿ ಕಾಂ. ಹರಿಯಪ್ಪಗೌಡ ಅವರು ಆಯ್ಕೆಯಾದರು. ಕಾಂ. ಸೂರ್ಯನಾರಾಯಣ ಭಟ್ ಅವರು ಎಸ್. ಎಫ್. ಐ. ಗೆ ಕಾರ್ಮಿಕ ಸಂಘಗಳ ಬೆಂಬಲ ಸೂಚಿಸಿದರು. ○

## ಹಲ್ಲೆಯ ಖಂಡನೆ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕುಣಿಗಲ್ ಶಾಖೆಯ ಸಭೆಯು ತಾ. 18-8-79 ರಂದು ಕಾಂ. ಮಹಮ್ಮದ್ ದಸ್ತಗೀರ್ ಅವರ ನೇತೃತ್ವದಲ್ಲಿ ಸೇರಿ, ತಿಪಟೂರಿನ ಕಾಂ. ಚನ್ನಬಸವಣ್ಣ ಮತ್ತು ಇತರ ಸಂಗಾತಿಗಳ ಮೇಲೆ ಜಾತಿವಾದಿಗಳು ನಡೆಸಿದ ಹಲ್ಲೆಯನ್ನು ಖಂಡಿಸಿತು. ಪ್ರತಿಗಾಮಿ, ಕೋಮುವಾದಿ ದುಷ್ಟಶಕ್ತಿಗಳ ಬಗ್ಗೆ ನಮ್ಮ ಪಕ್ಷದ ಎಲ್ಲ ಸದಸ್ಯರೂ ಎಚ್ಚರದಿಂದಿರಬೇಕೆಂದು ಪಕ್ಷದ ಕುಣಿಗಲ್ ಶಾಖೆಯು ತೀರ್ಮಾನಿಸಿತು. ●

# ತೆಲಂಗಾಣ ಹೋರಾಟ ಮತ್ತು ಕಮ್ಯುನಿಸ್ಟ್ ಪಕ್ಷ

ಕೆಂಬಾವುಟ ಜುಲೈ 29ನೆಯ ಸಂಚಿಕೆಯಲ್ಲಿ, "ಐಕ್ಯರಂಗ" (ಜುಲೈ 8) ದಲ್ಲಿ ಪ್ರಕಟವಾದ ತೆಲಂಗಾಣಾ ಹೋರಾಟದ ಬಗೆಗಿನ ಲೇಖನಕ್ಕೆ ಶ್ರೀ ಎಚ್.ಬಿ. ಚಿಂಚೋಳಿ ಎಂಬುವರ ಪ್ರತಿಕ್ರಿಯೆ ಪ್ರಕಟವಾಗಿದೆ.

ಮೊದಲನೆಯದಾಗಿ ಶ್ರೀ ಚಿಂಚೋಳಿಯವರು "ಈಗಿನ ಕಮ್ಯುನಿಸ್ಟ್‌ಪಕ್ಷ (ಸಿ. ಪಿ. ಐ.) ದ ನಾಯಕರು ಯಾವ ರೀತಿಯಿಂದ "ದ್ರೋಹ" ಬಗೆದರು ಎಂಬುದನ್ನು ಐಕ್ಯರಂಗ ವಿವರಿಸಿಲ್ಲ" ಎಂದಿದ್ದಾರೆ. ಈ ರೀತಿ ಹೇಳುವ ಮೊದಲು ಅವರೇ ಆ ಲೇಖನದಿಂದ ಉದ್ಧರಿಸುವ "ಭಿನ್ನಾಭಿಪ್ರಾಯಗಳು" ಎಂಬ ಪ್ಯಾರಾದಲ್ಲಿರುವ ಸಾಲುಗಳಲ್ಲಿ ಸ್ಥೂಲವಾಗಿ ಈ ದ್ರೋಹ ಏನು ಎಂದು ವಿವರಿಸಲಾಗಿದೆ. ದ್ರೋಹದ ಈ ವಿವರಣೆಯನ್ನು "ಅ ಕ್ರಾಂತಿಕಾರಿ ಚಳುವಳಿಯ ಬಗೆಗಿನ ಅಜ್ಞಾನ"ಎಂದು ಕರೆದು ಪುನಃ ಯಾವ ರೀತಿಯಿಂದ ದ್ರೋಹ ಬಗೆದರು ಎಂದು ಕೇಳುವುದರಲ್ಲಿ ಏನು ಅರ್ಥವಿದೆ ?

ಎರಡನೆಯದಾಗಿ ಅವರು, "ಐಕ್ಯರಂಗ" ದ ಲೇಖನದಲ್ಲಿ ಮಾಡಿರುವ ತಾತ್ವಿಕ ವಿಶ್ಲೇಷಣೆಯನ್ನು ಅಂದೇ ಈಗಿನ ಬಲಕಮ್ಯುನಿಸ್ಟ್ ಪಕ್ಷದ ನಾಯಕರು ಮಾಡಿದ್ದರು ಎಂದಿದ್ದಾರೆ. ಅವರು ಅಂದು ಮಾಡಿದ (ಇಂದೂ ಮುಂದುವರಿಸುತ್ತಿರುವ) ವಿಶ್ಲೇಷಣೆ: ಭಾರತದ ಸೈನ್ಯಗಳು ತೆಲಂಗಾಣಾ ಪ್ರವೇಶಿಸಿದ ನಂತರ ತೆಲಂಗಾಣಾ ಸಶಸ್ತ್ರ ಹೋರಾಟ ಮುಂದುವರಿಸುವ (ಯಾವುದೇ ಕಾರಣಕ್ಕೆ) ಅಗತ್ಯವಿರಲಿಲ್ಲ. ಸ್ವತಂತ್ರ ಭಾರತದ "ಪ್ರಜಾಸತ್ತಾತ್ಮಕ ನೆಹ್ರೂ ಸರ್ಕಾರದ" ವಿರುದ್ಧ ಸಶಸ್ತ್ರ ಹೋರಾಟ ನಡೆಸುವುದು ಪಂಥವಾದ ಮತ್ತು ವ್ಯಕ್ತಿ, ಗುಂಪು ಭಯೋತ್ಪಾದಕತನದ ನೀತಿ ಎಂಬುದು. ಆದರೆ ಐಕ್ಯರಂಗದ ಲೇಖನದಲ್ಲಿ ಹೇಳಲಾಗಿರುವುದು: 1948 ರ ನಂತರ ಸಶಸ್ತ್ರ ಹೋರಾಟ ನಿಲ್ಲಿಸಬೇಕಿತ್ತೆಂದು. ರೈತರು ಗೆದ್ದುಕೊಂಡ ಭೂಮಿ, ಮತ್ತಿತರ ಪ್ರಜಾಸತ್ತಾತ್ಮಕ ಹಕ್ಕು, ಸೌಲಭ್ಯಗಳ ರಕ್ಷಣೆ ಮತ್ತು ವಿಸ್ತಾರಕ್ಕೆ ಮಾತ್ರ ಆಂಶಿಕ ಸಶಸ್ತ್ರ ಹೋರಾಟ ಮುಂದುವರೆಸಬೇಕಿತ್ತು ಎಂಬುದು. ಈ ಎರಡು ವಿಶ್ಲೇಷಣೆಗಳ ನಡುವಿರುವ ವ್ಯತ್ಯಾಸಗಳನ್ನು ಮರೆಮಾಚುತ್ತಾ, ಶ್ರೀ ಚಿಂಚೋಳಿಯವರು "ಹೀಗೆ ಮಿಥ್ಯಾರೋಪ ಹೊರಿಸುವವರೇ ಆ ಚಳುವಳಿಗೆ ದ್ರೋಹ ಬಗೆದವರು" ಎಂದು "ವಿಧಿಯಿಲ್ಲದೆ" ಹೇಳಿದ್ದಾರೆ. "ಈ 'ಮಿಥ್ಯಾರೋಪ' ಹೊರಿಸುವವರು" ಯಾವಯಾವ ರೀತಿಯಿಂದ "ದ್ರೋಹ" ಬಗೆದರು ಎಂದು ನಾವು ಅವರನ್ನು ವಿವರಣೆ ಕೇಳಬಹುದೆ ?

ಮೂರನೆಯದಾಗಿ ಪಕ್ಷದ ತಪ್ಪು ನೀತಿಗಳ ಬಗ್ಗೆ ಪಕ್ಷದ ಸಮಷ್ಟಿ ಜವಾಬ್ದಾರಿಯ ವಿಷಯ ನಮಗೆ ಅವರು ಉಪದೇಶ ಮಾಡಬೇಕಾಗಿಲ್ಲ. ತೆಲಂಗಾಣಾ ಚಳುವಳಿಯಲ್ಲಿ ಆದ ಕೆಲವು ತಪ್ಪುಗಳಿಗೆ, ವೈಫಲ್ಯಗಳಿಗೆ ಪೂರ್ಣವಾಗಿ ಯಾವುದೇ ವ್ಯಕ್ತಿ ಅಥವಾ ಗುಂಪು ವೈಯಕ್ತಿಕವಾಗಿ ಕಾರಣ ಎಂದು ಲೇಖನದಲ್ಲಿ ಎಲ್ಲೂ ಹೇಳಿಲ್ಲ. ಚಳುವಳಿ ಹಿಂತೆಗೆದುಕೊಳ್ಳುವ ಸಮಯದಲ್ಲಿ ನಡೆದ (ರವಿನಾರಾಯಣರೆಡ್ಡಿ ಇತ್ಯಾದಿ ನಾಯಕರು ಚಳುವಳಿ ತ್ಯಜಿಸಿದ, ಚಳುವಳಿಯ ವಿರುದ್ಧ ನಡೆಸಿದ ಪ್ರಚಾರ) ಘಟನೆಗಳು ಮತ್ತು ಅದರಿಂದ ಚಳುವಳಿಗೆ ಆಗ ಮತ್ತು ನಂತರ ಆದ ಪರಿಣಾಮಗಳನ್ನಷ್ಟೇ ವಿವರಿಸಲಾಗಿದೆ. ಹಾಗೆಯೇ ಚಳುವಳಿಯ ಬಗ್ಗೆ ತಪ್ಪು ನೀತಿ ಅನುಸರಿಸುವುದಕ್ಕೂ, ಅದಕ್ಕೆ ಸಕ್ರಿಯ ದ್ರೋಹ ಬಗೆಯುವುದಕ್ಕೂ ಅಗಾಧ ವ್ಯತ್ಯಾಸವಿದೆ ಎಂದು ಶ್ರೀ ಚಿಂಚೋಳಿಯವರು ತಿಳಿಯಬೇಕು.

ಕೊನೆಯದಾಗಿ ಅವರು "ಭಾರತದ ಕಮ್ಯುನಿಸ್ಟ್ ಪಕ್ಷದ ಮೇಲೆ ಇಲ್ಲಸಲ್ಲದ ಕಪೋಲಕಲ್ಪಿತ ಆರೋಪಗಳನ್ನು ಹೊರಿಸಲು ಹೊಸ ಹೊಸ ಸಂಶೋಧನೆ ಮಾಡುವ ಬದಲು ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ರಂಗ ಕಟ್ಟಲು "ಐಕ್ಯರಂಗ" ಮುಂದಾಗಲಿ" ಎಂದು ಹಾರೈಸಿದ್ದಾರೆ. ಬಲಕಮ್ಯುನಿಸ್ಟ್ ಪಕ್ಷದ ಮೇಲೆ "ಆರೋಪ ಹೊರಿಸಲು" ಸಂಶೋಧನೆ ಏನೂ ಮಾಡಬೇಕಾಗಿಲ್ಲ. ನಡೆದ ಘಟನೆಗಳನ್ನು ನಡೆದ ಹಾಗೆ ಹೇಳಿದರೆ ಸಾಕು ! ಈವರೆಗೆ ನಡೆದು ಬಂದ ಎಡ ಮತ್ತು ಪ್ರಜಾಸತ್ತಾತ್ಮಕ ಚಳುವಳಿ (ತೆಲಂಗಾಣಾ ಚಳುವಳಿ ಈ ಚಳುವಳಿಯ ಒಂದು ಮುಖ್ಯ ಘಟ್ಟ) ಯ ತಪ್ಪು ಒಪ್ಪುಗಳ ಬಗೆಗಿನ ತಪ್ಪು ವಿಶ್ಲೇಷಣೆ (ಅದು ಯಾರದ್ದೇ ಆಗಿರಲಿ) ಯನ್ನು ಟೀಕಿಸುವುದು ಮತ್ತು ಸರಿಯಾದ ವಿಶ್ಲೇಷಣೆ ಬಗ್ಗೆ ಚರ್ಚೆ ಮತ್ತು ಪ್ರಚಾರ ನಡೆಸುವುದು, ಎಡ ಮತ್ತು ಪ್ರಜಾಸತ್ತಾತ್ಮಕ ರಂಗ ಕಟ್ಟುವ ಮಹಾಕಾರ್ಯದ ಅವಿಭಾಜ್ಯ ಅಂಗ ಎಂದು "ಐಕ್ಯರಂಗ" ದ ನಿಲುವು. ●

## ಕುಣಿಗಲ್‌ನಲ್ಲಿ ದುಡಿಯುವ ಮಹಿಳೆಯರ ಸಭೆ

ತುಮಕೂರು ಜಿಲ್ಲೆಯ ಕುಣಿಗಲ್‌ನಲ್ಲಿ ತಾ. 17-8-79ರಂದು ದುಡಿಯುವ ಮಹಿಳೆಯರ ಸಭೆಯನ್ನು ಕರೆಯಲಾಗಿತ್ತು. ಇದರ ಅಧ್ಯಕ್ಷತೆಯನ್ನು ಮುನಿಸಿಪಲ್ ಸದಸ್ಯರಾದ ಶ್ರೀಮತಿ ಜಯಮ್ಮ ಅವರು ವಹಿಸಿದ್ದರು. ಸಭೆಯನ್ನು ಉದ್ದೇಶಿಸಿ ಎಸ್. ಮಾಲತಿ, ವಂದನಾ, ಸಲಿಮಾ ಬೇಗಂ, ಇಂತಿಯಾಜ್ ಬೇಗಂ ಅವರು ಮಾತನಾಡಿದರು. ದುಡಿಯುವ ಮಹಿಳೆಯರ ಹಕ್ಕುಗಳು ಮತ್ತು ಸವಲತ್ತುಗಳಿಗಾಗಿ ಹೋರಾಟ ನಡೆಸಬೇಕೆಂದು ಸಭೆಗೆ ಕರೆ ಕೊಡಲಾಯಿತು. ನಂತರ ಕಾಂ. ಮಹಮ್ಮದ್ ದಸ್ತಗೀರ್, ಕಾಂ. ಬಡೇಸಾಬ್, ಕಾಂ. ಯೂನುಸ್ ಖಾನ್, ಕಾಂ. ಅಂಜಪ್ಪ ಅವರು ಮಾತನಾಡಿದರು. ○

## ಕೆಂಬಾವುಟದ ಅಪಪ್ರಚಾರ

ಬಿಜಾಪುರ ನಗರಸಭೆ ಚುನಾವಣೆಯ ಫಲಿತಾಂಶವನ್ನು ಕುರಿತು ಬಲ ಕಮ್ಯುನಿಸ್ಟರ "ಕೆಂಬಾವುಟ" ಪತ್ರಿಕೆ ಅಸತ್ಯ ಸಂಗತಿಯನ್ನು ಪ್ರಕಟಿಸಿದೆ. ಈ ಚುನಾವಣೆಯಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಮಾತ್ರ ತನ್ನ ಐದು ಅಧಿಕೃತ ಉಮೇದುವಾರರನ್ನು ನಿಲ್ಲಿಸಿತ್ತು. ಈ ಐದು ಜನರ ಪೈಕಿ ಇಬ್ಬರು ಆರಿಸಿ ಬಂದಿದ್ದಾರೆ. ಬಲ ಕಮ್ಯುನಿಸ್ಟರ ಪೈಕಿ, ಹೋದ ಬಾರಿ ಸ್ವತಂತ್ರ ಉಮೇದುವಾರರಾಗಿ ನಿಂತು ಒಬ್ಬರು ಆರಿಸಿ ಬಂದಿದ್ದರು. ಈ ಬಾರಿ ಅವರ ಬದಲಾಗಿ ಮತ್ತೊಬ್ಬ ಪ್ರಮುಖ ಬಲ ಕಮ್ಯುನಿಸ್ಟರು ಸ್ವತಂತ್ರ ಉಮೇದುವಾರರಾಗಿ ಸ್ಪರ್ಧಿಸಿ ಸೋತಿದ್ದಾರೆ. ಬಲ ಕಮ್ಯುನಿಸ್ಟರಿಬ್ಬರು ಆರಿಸಿ ಬಂದಿದ್ದಾರೆ ಎಂಬ ಕೆಂಬಾವುಟದ ವರದಿ ಸುಳ್ಳಿನ ಕಂತೆ. ತಮ್ಮವರೆಂದು ಇವರು ಹೇಳಿಕೊಂಡಿರುವ ಆ ಇಬ್ಬರೂ ಇಂದಿರಾ ಕಾಂಗ್ರೆಸ್ ಪ್ರಚಾರಕರು. ಇಂದಿರಾಗಾಂಧಿಯನ್ನು ಪುರೋಗಾಮಿ ಎಂದು ಬಣ್ಣಿಸುತ್ತ ತುರ್ತುಪರಿಸ್ಥಿತಿಯಲ್ಲಿ ಆಕೆಗೆ ಬೆಂಬಲವಿತ್ತ ಬಲ ಕಮ್ಯುನಿಸ್ಟರು ಇವರಿಬ್ಬರೂ ತಮ್ಮ ಪಕ್ಷದವರೆಂದು ಹೇಳಿಕೊಳ್ಳುವುದರಲ್ಲಿ ಆಶ್ಚರ್ಯವಿಲ್ಲ. ●

## ಆರ್ಥಿಕ ಸಮೀಕ್ಷೆ :

[3ನೇ ಪುಟದಿಂದ]

ಅಪ್ರತ್ಯಕ್ಷ ತೆರಿಗೆಯಲ್ಲಿ ವಿನಾಯತಿ ತೋರಿಸಲಾಗಿತ್ತು. ಪ್ರಸ್ತುತ ಬೆಲೆ ಏರಿಕೆಯಲ್ಲಿಯೂ ವ್ಯವಸಾಯಕ್ಕೆ ಬಳಸುವ ರಾಸಾಯನಿಕ ಗೊಬ್ಬರ ಉತ್ಪಾದನೆಗೆ ಬಳಸುವ ಪೆಟ್ರೋಲಿಯಂ ಪದಾರ್ಥಗಳಿಗೂ ವಿನಾಯತಿ ತೋರಿಸಲಾಗಿದೆ. ವ್ಯವಸಾಯದಲ್ಲಿ ಇತರ ಉದ್ದೇಶಗಳಿಗೆ ಬಳಸುವ ಪೆಟ್ರೋಲಿಯಂ ಪದಾರ್ಥಗಳ ಬೆಲೆ ಏರಿಕೆಯಿಂದಾಗಿ ಒಟ್ಟು ರೂ. 870 ಕೋಟಿಯಲ್ಲಿ ಸುಮಾರು 49 ಕೋಟಿಯಷ್ಟು ಭಾರ ಕೃಷಿ ವಲಯಕ್ಕೆ ಬೀಳುವುದು, ಪರಿಣಾಮ? ವ್ಯವಸಾಯದಲ್ಲಿ ಯಂತ್ರೋಪಕರಣಗಳನ್ನು ರಾಸಾಯನಿಕ ಗೊಬ್ಬರಗಳನ್ನು ಹೆಚ್ಚು ಬಳಸುವ ಶ್ರೀಮಂತ ರೈತರೂ ದೊಡ್ಡ ಭೂಮಾಲಿಕರೂ ಪೆಟ್ರೋಲಿಯಂ ಪದಾರ್ಥಗಳಮೇಲಿನ ಅಪ್ರತ್ಯಕ್ಷ ತೆರಿಗೆ ಹಾಗೂ ಬೆಲೆ ಏರಿಕೆಯ ಆಘಾತದಿಂದ ತಪ್ಪಿಸಿಕೊಳ್ಳುವಂತಾಯಿತು. ಗ್ರಾಮೀಣ ಶ್ರೀಮಂತ ರೈತರಿಗೆ ಮತ್ತು ದೊಡ್ಡ ಭೂಮಾಲಕರಿಗೆ ಸಧ್ಯ ವರ್ಷಕ್ಕೆ ರೂ 1000 ಕೋಟಿಯಷ್ಟು ಸಹಾಯಧನ ನೀಡಿ ರಸಗೊಬ್ಬರ, ನೀರು, ವಿದ್ಯುತ್, ಯಂತ್ರೋಪಕರಣ ಇತ್ಯಾದಿಗಳನ್ನು ಸುಲಭ ಬೆಲೆಯಲ್ಲಿ ಒದಗಿಸಿಕೊಡುವುದಲ್ಲದೆ, ಅವರ ಫಸಲಿಗೆ ಯೋಗ್ಯ ಹಾಗೂ ನಿಶ್ಚಿತ ಬೆಲೆಗಳು ಸಿಗುವಂತೆ ಸಾರ್ವಜನಿಕ ಖರೀದಿ ವ್ಯವಸ್ಥೆಯ ಅನುಕೂಲವೂ ದೊರಕುವುದು. ಇಷ್ಟಾದರೂ ಈ ವರ್ಗ ತಮ್ಮ ಆಸ್ತಿ ಆದಾಯಗಳ ಮೇಲೆ ಪ್ರತ್ಯಕ್ಷ ತೆರಿಗೆಯನ್ನು ಕೊಡಬೇಕಾಗಿಲ್ಲ! ಸರಕಾರದ ಈ ಧೋರಣೆಯಿಂದಲೂ ಆರ್ಥಿಕ ಅಸಮಾನತೆಯು ಇನ್ನಷ್ಟೂ ಹೆಚ್ಚುವುದು. ಸರಕಾರದ ಆರ್ಥಿಕ ಆಡಳಿತ ಧೋರಣೆಯು ಭೂಮಾಲಕರ ಶ್ರೀಮಂತ ರೈತರ ಹಾಗೂ ಬಂಡವಾಳಶಾಹಿಗಳ ಪರವಾಗಿದೆ ಎನ್ನುವುದು ಸ್ಪಷ್ಟವಾಗಿದೆ. ಅಂತರಾಷ್ಟ್ರೀಯ ಹಾಗೂ ರಾಷ್ಟ್ರೀಯ ಆರ್ಥಿಕ ದುಸ್ಥಿತಿಯ ಪರಿಣಾಮಗಳನ್ನು ಬೆಲೆ ಏರಿಕೆ ಹಾಗೂ ಕರಹೇರಿಕೆಗಳ ಮೂಲಕ ಜನಕೋಟಿಯ ಮೇಲೆ, ಶ್ರಮಿಕ ವರ್ಗದ ಮೇಲೆ ನಿರ್ದಾಕ್ಷಿಣ್ಯವಾಗಿ ಹೇರಲಾಗುತ್ತಿರುವುದನ್ನು ಗಮನಿಸಬೇಕು.

### ರಾಷ್ಟ್ರೀಯ ಇಂಧನ ಧೋರಣೆ :

ಕೊನೆಯದಾಗಿ, ಮೂವತ್ತು ವರುಷಗಳ ಕಾಂಗ್ರೆಸ್ ಆಡಳಿತದಲ್ಲಾಗಲೀ ನಂತರದ ಜನತಾ ಆಡಳಿತದಲ್ಲಾಗಲೀ ರಾಷ್ಟ್ರೀಯ ಇಂಧನ ಧೋರಣೆಯನ್ನು ಇನ್ನೂ ಸಮರ್ಪಕವಾಗಿ ರೂಪಿಸಲಿಲ್ಲ. ದೇಶದ ನೈಸರ್ಗಿಕ ಸಂಪನ್ಮೂಲಗಳಾದ ಕಲ್ಲಿದ್ದಲು, ಜಲಶಕ್ತಿ, ಇತ್ಯಾದಿಗಳನ್ನು ಇನ್ನೂ ಸಮರ್ಪಕವಾಗಿ ಬಳಸಿಕೊಳ್ಳಲಾಗಲಿಲ್ಲ, ಸಮಾಜವಾದಿ ಚೀನಾದೇಶದಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಗೊಬ್ಬರ, ಬೆಳಕು ಮತ್ತು ಶಾಖಗಳಿಗೆ ಸಸ್ಯ, ಪ್ರಾಣಿ ಹಾಗೂ ಮಾನವ ಮೂಲದ ವಿಸರ್ಜನೆಗಳನ್ನು (wastes) ವೈಜ್ಞಾನಿಕವಾಗಿ ಬಳಸಲಾಗುತ್ತಿದ್ದು, ಪೆಟ್ರೋಲಿಯಂ ಪದಾರ್ಥಗಳ ಬಳಕೆಯಲ್ಲಿ ಮಿತವ್ಯಯ ಸಾಧಿಸಲಾಗಿದೆ. ನಮ್ಮ ದೇಶದಲ್ಲಿ ಇಂತಹ ಮೂಲಗಳನ್ನು ಬಳಸುವ ಗೋಬರ್‌ಗ್ಯಾಸ್ ವ್ಯವಸ್ಥೆಗಳು ಇನ್ನೂ ಜನಪ್ರಿಯವಾಗಿಲ್ಲ. ಮತ್ತು ಅವುಗಳು ಬಡವರಿಗೆ, ಜನಸಾಮಾನ್ಯರಿಗೆ ಎಟುಕುವಂತಹವುಗಳೂ ಅಲ್ಲ. ಭಾರತದಲ್ಲಿ ವಿದ್ಯುತ್ ಉತ್ಪಾದನೆ ಹಾಗೂ ಬಳಕೆಯು ತುಂಬಾ ಹಿಂದುಳಿದಿದೆ. 1974 ರಲ್ಲಿ ದೇಶದ ಜನರ ಸರಾಸರಿ ವಿದ್ಯುತ್ ಬಳಕೆಯು ಕೇವಲ 97kw. ಆಗಿದ್ದರೆ ಸೋವಿಯತ್ ಯೂನಿಯನ್ ಹಾಗೂ ಅಮೇರಿಕಾ ಸಂಯುಕ್ತ ಸಂಸ್ಥಾನಗಳಲ್ಲಿ ತಲಾ ಸರಾಸರಿ ಅನುಕ್ರಮವಾಗಿ 3840kw ಮತ್ತು 9370kw. ಆಗಿದೆ. ಚೀನಾ ಮತ್ತು ಅನೇಕ ಅಭಿವೃದ್ಧಿ ಹೊಂದುತ್ತಿರುವ ದೇಶಗಳ ವಿದ್ಯುತ್ ಮತ್ತು ಇತರ ಶಕ್ತಿಗಳ ಬಳಕೆಯು ನಮ್ಮ ದೇಶಕ್ಕಿಂತ ಗಣನೀಯವಾಗಿ ಹೆಚ್ಚಾಗಿದೆ. ಆದುದರಿಂದ ಅಂತಹ ಅಭಿವೃದ್ಧಿ ಹೊಂದಿದ ಹಾಗೂ ಹೊಂದುತ್ತಿರುವ ದೇಶಗಳಲ್ಲಿ ಪೆಟ್ರೋಲಿಯಂ ಪದಾರ್ಥಗಳ ಬಳಕೆಯನ್ನು ಮಿತಗೊಳಿಸಬಹುದಾಗಿದೆ. 1975 ರಷ್ಟರಲ್ಲಿ ಭಾರತದ ಒಟ್ಟು 5,73,860 ಹಳ್ಳಿಗಳಲ್ಲಿ ಕೇವಲ ಶೇ. 29.5 ರಷ್ಟು, ಅಂದರೆ 1,69,244 ಹಳ್ಳಿಗಳಿಗೆ ವಿದ್ಯುತ್ ಪೂರೈಸಲಾಗಿದೆ. ಕಾರಣ ಭಾರತದ ಗ್ರಾಮೀಣ ಜನರು ಬೆಳಕಿಗೆ ಹೆಚ್ಚಾಗಿ ಸೀಮೆಎಣ್ಣೆಯನ್ನೇ ಬಳಸಬೇಕಾಗುವುದು. ನಮ್ಮ ದೇಶದ ಜಲವಿದ್ಯುತ್ ಉತ್ಪಾದನಾ ಸಾಧ್ಯತೆಯು 25.26 ಮಿಲಿಯ kw. ಎಂದು ಅಂದಾಜು ಮಾಡಲಾಗಿದ್ದು, ಈಗಿರುವ ಎಲ್ಲಾ ಜಲವಿದ್ಯುತ್ ಯೋಜನೆಗಳಿಂದ ಕೇವಲ 3.6 ಮಿಲಿಯ kw., ಅಂದರೆ ಶೇ. 14.3 ರಷ್ಟು ವಿದ್ಯುತ್ ಶಕ್ತಿಯನ್ನು ಪಡೆಯಲಾಗುತ್ತಿದೆ. ಈಗ ಕೈಗೊಂಡಿರುವ ಎಲ್ಲಾ ಜಲವಿದ್ಯುತ್ ಯೋಜನೆಗಳು ಸಂಪೂರ್ಣಗೊಂಡರೂ ಇನ್ನು 2.52 ಮಿಲಿಯ kw. ಹೆಚ್ಚು ವಿದ್ಯುತ್ ಪಡೆಯಬಹುದು. ಉತ್ಪಾದಿತ ವಿದ್ಯುತ್ ಕೂಡಾ ಸಮರ್ಪಕವಾಗಿ ಸರಬರಾಜು ಮಾಡುವ ವ್ಯವಸ್ಥೆ ಇಲ್ಲ. ಪೆಟ್ರೋಲಿಯಂ ಬಳಕೆಯನ್ನು ಮಿತಿಗೊಳಿಸಲು ಪರ್ಯಾಯ ಇಂಧನಗಳನ್ನು ಅಭಿವೃದ್ಧಿಗೊಳಿಸಬೇಕು. ನಮ್ಮ ದೇಶದ ಪೆಟ್ರೋಲಿಯಂ ಉತ್ಪಾದನೆಯ ಸಾಧ್ಯತೆಯನ್ನೂ ಹೆಚ್ಚಿಸಬೇಕು.

### ಸರಕಾರದ ವೈಫಲ್ಯ :

ಆದರೆ, ಇದುವರೆಗಿನ ಬಂಡವಾಳಶಾಹಿ-ಭೂಮಾಲಕ ಸರಕಾರವು ಸೂಕ್ತ ರಾಷ್ಟ್ರೀಯ ಇಂಧನ ಧೋರಣೆಯನ್ನು ಅನುಷ್ಠಾನಕ್ಕೆ ತರಲು ವಿಫಲವಾಗಿದೆ. ಪರಿಣಾಮವಾಗಿ, ಆಮದು ಮಾಡಿಕೊಳ್ಳುವ ಪೆಟ್ರೋಲಿಯಂನ ಮೇಲೆಯೇ ಅವಲಂಬಿಸಿಕೊಳ್ಳಬೇಕಾಗಿದೆ. ಅಂತರಾಷ್ಟ್ರೀಯ ಮಟ್ಟದಲ್ಲಿ ಪೆಟ್ರೋಲಿಯಂ ಉತ್ಪಾದನೆಯಲ್ಲಿನ ಕಡಿತ ಹಾಗೂ ಬೆಲೆಏರಿಕೆಗಳನ್ನು ಸಮರ್ಪಕವಾಗಿ ನಿಭಾಯಿಸಿಕೊಳ್ಳಲಾಗದೆ, ದೇಶದ ಆರ್ಥಿಕ ವ್ಯವಸ್ಥೆಯಲ್ಲಿ ಅವುಗಳನ್ನು ಹರಿಯಬಿಟ್ಟು ದುಃಸ್ಥಿತಿಯ ಭಾರವನ್ನು ಜನಕೋಟಿಯ ಮೇಲೆ ಹೇರಿ ಹಣದುಬ್ಬರಕ್ಕೆ ಪ್ರಚೋದನೆ ಸಿಗುವಂತಾಗಿದೆ. ಸರಕಾರದ ಈ ಹತಾಷೆ ಧೋರಣೆಯನ್ನು ಪ್ರತಿಭಟಿಸಬೇಕು. ಜನಸಾಮಾನ್ಯರ ಮೇಲೆ, ಶ್ರಮಿಕವರ್ಗದ ಮೇಲೆ ಹೇರಿದ ಹೊಸ ಬೆಲೆಏರಿಕೆಯನ್ನೂ ಕರಭಾರವನ್ನೂ ಸಂಘಟಿತರಾಗಿ ಪ್ರತಿಭಟಿಸಬೇಕು. ●

## ಪೌರಾಡಳಿತ ಸಚಿವರಿಗೆ ಮನವಿ ಪತ್ರ

ಶಿಡ್ಲಘಟ್ಟ ಪಟ್ಟಣದ ಕುಡಿಯುವ ನೀರಿನ ಸರಬರಾಜಿನ ಕಥೆ ಸರ್ವವಿದಿತವಾದದ್ದು. ಈವರೆಗೂ ಯಾವುದೇ ಪರಿಹಾರ ಇದಕ್ಕೆ ಸಿಕ್ಕಿಲ್ಲ. ಆದರೂ ನೀರಿನದರ ವಸೂಲಿ ಮಾತ್ರ ತಪ್ಪಿಲ್ಲ. ಜನಸಾಮಾನ್ಯರ ಈ ಬವಣೆಯ ಬಗ್ಗೆ ಪೌರಾಡಳಿತ ಸಚಿವರಿಗೆ ಮನವಿ ಪತ್ರ ಅರ್ಪಿಸಲಾಗಿದ್ದು ಇದರ ನಕಲು ಪ್ರತಿಯನ್ನು ಪುರಸಭಾಧ್ಯಕ್ಷರಿಗೂ ಕೊಡಲಾಗಿದೆ. ●

## ........ಕೇಂದ್ರ ಸಮಿತಿಯ ನಿರ್ಣಯದ ಬಗ್ಗೆ

[2ನೇ ಪುಟದಿಂದ]

ತಲೆಕೆಳಗಾಯಿತು. ಬೂರ್ಜ್ವ ಜಮೀನ್ದಾರಿ ಪಕ್ಷಗಳು ಈಗ ಒಟ್ಟು ನಾಲ್ಕು ಆಗಿವೆ. ಆರ್.ಎಸ್.ಎಸ್. ಹಿಡಿತದ ಜನತಾ ಪಕ್ಷ, ಬಿ.ಎಲ್.ಡಿ. ಹಿಡಿತದ ಜನತಾ(ಎಸ್) ಕಾಂಗ್ರೆಸ್(ಐ) ಮತ್ತು ಕಾಂಗ್ರೆಸ್(ಎಸ್) ಪಕ್ಷಗಳೇ ಆ ನಾಲ್ಕು ಪಕ್ಷಗಳಾಗಿವೆ. ಈ ನಾಲ್ಕು ಪಕ್ಷಗಳು ಪ್ರಸಕ್ತ ಸಂಸತ್ತಿನ 542 ಸ್ಥಾನಗಳಲ್ಲಿ 450 ಸ್ಥಾನಗಳನ್ನು ಪಡೆದಿವೆ. ದೇಶದಲ್ಲಿನ ಮತದಾರರ ಶೇ. 75ರಿಂದ 80ಭಾಗದ ಬೆಂಬಲವನ್ನು ಈ ನಾಲ್ಕೂ ಪಕ್ಷಗಳು ಇಂದಿಗೂ ಪಡೆದಿವೆ. ಈ ಒಂದು ನಿರ್ದಿಷ್ಟ ರಾಜಕೀಯ ಸನ್ನಿವೇಶದಲ್ಲಿ ದೇಶದಲ್ಲಿನ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ಒಂದು ಪರಿಣಾಮಕಾರಿ ಪಾತ್ರ ವಹಿಸುವುದರ ಮೂಲಕ ದೇಶದ ಎರಡೂ ಗಂಡಾಂತರಗಳಾದ ಆರ್.ಎಸ್.ಎಸ್.ನ ಕೋಮುವಾದ ಮತ್ತು ಇಂದಿರಾಗಾಂಧಿಯ ಸರ್ವಾಧಿಕಾರಿ ನೀತಿಗಳ ವಿರುದ್ಧ ಹೋರಾಡಬೇಕಾಗಿದೆ.

ಜನತಾ ಮತ್ತು ಕಾಂಗ್ರೆಸ್ ಪಕ್ಷಗಳು ಈಗ ಒಟ್ಟು ನಾಲ್ಕು ಪಕ್ಷಗಳಾಗಿ ಒಡೆದು ಹೋಗಿರುವುದರಿಂದ ಒಂದು ದೊಡ್ಡ ಅಪಾಯವಾಗಿದೆ. ಅದೆಂದರೆ, ಕೋಮುವಾದ ಮತ್ತು ಸರ್ವಾಧಿಕಾರದ ವಿರುದ್ಧದ ಹೋರಾಟವನ್ನು ದೊಡ್ಡ ಪಕ್ಷಗಳಲ್ಲಿನ ಒಡಕು ಕಡಿಮೆ ಮಾಡಿದೆ. 1977ರ ಸಾರ್ವತ್ರಿಕ ಚುನಾವಣೆಗಳ ನಂತರ ದೂಳೀಪಟವಾಗಿದ್ದ ಇಂದಿರಾ ಕಾಂಗ್ರೆಸ್ಸು ಈಗಲೂ ಸಹ ತನ್ನ ಸರ್ವಾಧಿಕಾರಿ ಗುಣವನ್ನು ಎತ್ತಿ ಹಿಡಿಯುತ್ತಿದೆ ಮತ್ತು ಅದಕ್ಕೆ ಜನತಾದ ಒಡಕಿನಿಂದಾಗಿ ಈಗ ಹೆಚ್ಚು ಶಕ್ತಿ ಬಂದಿದೆ. ಆರ್. ಎಸ್. ಎಸ್.-ಜನಸಂಘವು ಜನತಾ ಒಡಕಿನಿಂದ ಸ್ವಲ್ಪ ಪೆಟ್ಟು ತಿಂದಿದ್ದರೂ 90 ಜನ ಸಂಸತ್ ಸದಸ್ಯರ ಬಲವುಳ್ಳ ಅದು ಇನ್ನೂ ಒಂದು ಶಕ್ತಿಯಾಗಿಯೇ ಉಳಿದಿದೆ. ಕಾಂಗ್ರೆಸ್ (ಎಸ್) ಮತ್ತು ಜನತಾ (ಎಸ್) ನವರು ಒಂದುಕಡೆ, ಜಗಜೀವನ್‌ರಾಮ್ ನೇತೃತ್ವದ ಜನತಾ ಒಂದುಕಡೆ ಎಂದು ಎರಡೂ ಗುಂಪಿನವರು ಇಂದಿರಾಗಾಂಧಿಯೊಡನೆ ವ್ಯವಹರಿಸಲು ಮುಂದಾದರು. ಈ ಬೆಳವಣಿಗೆಯಿಂದಾಗಿ ಕೋಮುವಾದ ಹಾಗೂ ಸರ್ವಾಧಿಕಾರ ಎಂಬ ಎರಡೂ ಗಂಡಾಂತರಗಳ ವಿರುದ್ಧದ ಹೋರಾಟವನ್ನು ಮುಂದುವರಿಸುವುದು ಅತ್ಯಂತ ಕ್ಲಿಷ್ಟಕರವಾಗತೊಡಗಿತು.

ಈ ಹಿನ್ನೆಲೆಯಲ್ಲೇ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿಯು "ಕಾಂಗ್ರೆಸ್ (ಐ) ಮತ್ತು ಆರ್. ಎಸ್. ಎಸ್.-ಜನಸಂಘದ ಬೆಂಬಲ ಪಡೆಯದ ಯಾವುದೇ ಗುಂಪಿನ ಸರ್ಕಾರಕ್ಕೆ ತನ್ನ ಬೆಂಬಲ ಕೊಡುತ್ತದೆ" ಎಂದು ನಿರ್ಣಯ ಮಾಡಿದ್ದು.

ಒಂದು ಪಕ್ಷ ಇಂತಹ ಸರ್ಕಾರ ರಚನೆಯ ವಿಫಲವಾದಲ್ಲಿ ಜನತೆಯ ಬಳಿಗೆ ಹೋಗಿ ಮತ್ತೆ ವಿಶ್ವಾಸ ಪಡೆದು ಬರುವುದು ಒಂದೇ ಮಾರ್ಗವೆಂದೂ ಸಿ.ಪಿ.ಐ. (ಎಂ) ತನ್ನ ಕೇಂದ್ರ ಸಮಿತಿಯ ನಿರ್ಣಯದಲ್ಲಿ ಹೇಳಿತ್ತು.

ಸಿ. ಪಿ. ಐ. (ಎಂ)ನ ಈ ನಿಲುವು ಅಂದಿನ ರಾಜಕೀಯ ಪರಿಸ್ಥಿತಿಯಲ್ಲಿ ಸರಿಯಾಗಿತ್ತೆ ?

ಆನಂತರ ಜರುಗಿದ ಘಟನೆಗಳು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನಿಲುವು ಸರಿಯಾಗಿತ್ತು ಎಂದು ಸ್ಪಷ್ಟವಾಗಿ ತೋರಿಸಿಕೊಟ್ಟಿವೆ.

1979ರ ಜುಲೈ 24ರಂದು ಪಕ್ಷದ ಪೊಲಿಟ್‌ಬ್ಯೂರೊವು ತನ್ನ ಕೇಂದ್ರ ಸಮಿತಿಯ ನಿರ್ದೇಶನದ ಮೇರೆಗೆ ಮತ್ತೊಂದು ಹೇಳಿಕೆಯನ್ನು ನೀಡಿತ್ತು. ಪೊಲಿಟ್‌ಬ್ಯೂರೋನ ಹೇಳಿಕೆಯಾದರೂ ಏನಾಗಿತ್ತು ಎಂಬುದನ್ನು ಸ್ವಲ್ಪ ನೋಡೋಣ.

"ಸರ್ಕಾರ ರಚನೆಗಾಗಿ ಎಲ್ಲ ತತ್ವಗಳನ್ನೂ ಗಾಳಿಗೆ ತೂರಲಾಗುತ್ತಿದೆ ಎಂದು ಕಾಣುತ್ತಿದ್ದೇವೆ. ಕೆಲವು ಜನತಾ (ಎಸ್) ನಾಯಕರು ಇಂದಿರಾ ಕಾಂಗ್ರೆಸ್‌ನ ಬೆಂಬಲಕ್ಕೂ ಕಾದು ನಿಂತಿದ್ದಾರೆ. ಈ ಬೆಳವಣಿಗೆಯಿಂದಾಗಿ ಚರಣ್ ನೇತೃತ್ವದ ಜನತಾ ಸರ್ಕಾರವು ತನ್ನ ಉಳಿವಿಗೆ ಮತ್ತು ಅಸ್ತಿತ್ವಕ್ಕಾಗಿ ಕಾಂಗ್ರೆಸ್- (ಐ) ಬೆಂಬಲದ ಮೇಲೇ ಹೆಚ್ಚು ಅವಲಂಬಿತವಾಗುವುದು ಎಂಬುದು ಮನವರಿಕೆಯಾಗಿದೆ. ಆದುರಿಂದ ಇಂತಹುದೊಂದು ಸರ್ಕಾರಕ್ಕೆ ಸಿ. ಪಿ. ಐ. (ಎಂ) ಎಂದಿಗೂ ಬೆಂಬಲ ಕೊಡಲಾರದು. ಆರ್ ಎಸ್. ಎಸ್.-ಜನಸಂಘ ಕೂಟದ ಸರ್ಕಾರ ರಚನೆಗೂ ಸಿ. ಪಿ. ಐ. (ಎಂ) ಪೊಲಿಟ್‌ಬ್ಯೂರೊ ತನ್ನ ಪ್ರಬಲ ವಿರೋಧವನ್ನು ವ್ಯಕ್ತಪಡಿಸುತ್ತದೆ."

ಜುಲೈ 24ರ ಪೊಲಿಟ್‌ಬ್ಯೂರೊ ಹೇಳಿಕೆಯು ಜುಲೈ 21ರ ಕೇಂದ್ರಸಮಿತಿಯ ಹೇಳಿಕೆಗೆ ಅನುಗುಣವಾಗಿಯೇ ಇತ್ತು ಮಾತ್ರವಲ್ಲ, ಕಾಂಗ್ರೆಸ್(ಐ)ನ ಸರ್ವಾಧಿಕಾರಿ ಧೋರಣೆ ಮತ್ತು ಆರ್. ಎಸ್ ಎಸ್. ಜನಸಂಘದ ಕೋಮುವಾದಿ ನೀತಿಯ ವಿರುದ್ಧ ಜನತೆ ತಮ್ಮ ಹೋರಾಟವನ್ನು ದಾಖಲು ಮಾಡಬೇಕೆಂಬ ಕರೆಯು ಅದಾಗಿತ್ತು.

ಜನತಾ(ಎಸ್) ಮತ್ತು ಕಾಂಗ್ರೆಸ್ (ಎಸ್) ಪಕ್ಷದ ಒಳಗಡೆ ಇರುವ ಸರ್ವಾಧಿಕಾರಿ ವಿರೋಧಿ ಶಕ್ತಿಗಳು, ಚರಣ್ ನೇತೃತ್ವದ ಸರ್ಕಾರವು ಕಾಂಗ್ರೆಸ್ (ಐ) ಪಕ್ಷದ ಮೇಲೆ ಅವಲಂಬನವಾಗದಂತೆ ಹೋರಾಡಬೇಕೆಂಬುದೂ ಸಿ.ಪಿ.ಐ. (ಎಂ) ಪೊಲಿಟ್ ಬ್ಯೂರೊ ಕರೆಯಾಗಿತ್ತು.

ಪೊಲಿಟ್ ಬ್ಯೂರೋವಿನ ಜುಲೈ 24ರ ಹೇಳಿಕೆಯು ಮತ್ತು ಕೇಂದ್ರ ಸಮಿತಿಯ ಜುಲೈ 16ರ ನಿರ್ಣಯವು ನಮ್ಮ ನಿಲುವಿನ ಸತ್ಯವನ್ನು ರುಜುವಾತು ಪಡಿಸಿದವೆ ? ಹೌದು. ಅವು ರುಜುವಾತುಪಡಿಸಿದವು.

ಮೊದಲನೆಯದಾಗಿ, ಜನತಾ (ಎಸ್) ಮತ್ತು ಕಾಂಗ್ರೆಸ್(ಎಸ್) ಪಕ್ಷಗಳ ಸಮ್ಮಿಶ್ರ ಸರ್ಕಾರದ ಮೇಲೆ ಕಾಂಗ್ರೆಸ್(ಐ) ಪಕ್ಷವು ಹಲವು ರೀತಿಯ ಒತ್ತಡವನ್ನು ಹೇರಲು ಶುರುಮಾಡಿತು. 'ವಿಶೇಷ ನ್ಯಾಯಾಲಯಗಳ' ರದ್ದತಿಯನ್ನೂ ಸೇರಿದಂತೆ ಹಲವು ರಿಯಾಯಿತಿಗಳನ್ನು ಇಂದಿರಾ ಕಾಂಗ್ರೆಸ್ ಕೇಳಿತು. ಸರ್ಕಾರ ರಚನೆಗೆ ತಾನು ಕೊಟ್ಟ 'ಬೇಷರತ್' ಬೆಂಬಲವನ್ನು ವಾಪಸು ತೆಗೆದುಕೊಳ್ಳುವುದಾಗಿ ಅದು ಬೆದರಿಕೆ ಹಾಕಿತು. ಸರ್ಕಾರವು ಆಗಸ್ಟ್ 20ರಂದು ವಿಶ್ವಾಸ ಮತ ಕೇಳುವಾಗ ತಾನು ತಟಸ್ಥವಾಗಿರುವುದಾಗಿ ಅಥವಾ ಸರ್ಕಾರದ ವಿರುದ್ಧ ಮತ ಚಲಾಯಿಸುವುದಾಗಿಯೂ ಇಂದಿರಾ ಕಾಂಗ್ರೆಸ್ ಹೇಳಿತು.

ಎರಡನೆಯದಾಗಿ, ಜನತಾ ಪಕ್ಷವು ಆಡಳಿತ ನಡೆಸುತ್ತಿರುವ ಬಿಹಾರ ಮತ್ತು ಹರಿಯಾಣ ರಾಜ್ಯಗಳಲ್ಲಿ ಕಾಂಗ್ರೆಸ್(ಐ) ಪಕ್ಷವು ಆರ್.ಎಸ್.ಎಸ್.-ಜನಸಂಘದ ಜೊತೆ ತನ್ನ ಸ್ವಂತ ಲಾಭಕ್ಕಾಗಿ ಮೈತ್ರಿ ಬೆಳೆಸಿತು; ಜನತಾ (ಎಸ್) ಮತ್ತು ಕಾಂಗ್ರೆಸ್ (ಎಸ್) ಗಳನ್ನು ವಿರೋಧಿಸುತ್ತಾ ಇಂದಿರಾ ಕಾಂಗ್ರೆಸ್ ಈ ಕೆಲಸ ಮಾಡಿತು. ಜೊತೆಗೆ ಕೆಲವು ದಿವಸಗಳ ಹಿಂದಷ್ಟೇ ಜನತಾ (ಎಸ್) ಕಾಂಗ್ರೆಸ್ (ಎಸ್) ಪಕ್ಷಗಳ ಸರ್ಕಾರ ರಚನೆಗೆ ತಾನು ಬೇಷರತ್ ಬೆಂಬಲಕೊಡುವುದಾಗಿ ಕಾಂಗ್ರೈ ಹೇಳಿತ್ತು. ಹೀಗೆ ಇಂದಿರಾ ಕಾಂಗ್ರೆಸ್ ಮತ್ತು ಜನತಾ (ಎಸ್) ಮೈತ್ರಿಯ ನಡುವೆ ಘರ್ಷಣೆ ಆರಂಭವಾಯಿತು.

ಮೂರನೆಯದಾಗಿ, ಷಾ ಆಯೋಗ ವಿಚಾರಣೆಯಲ್ಲಿ ಇಂದಿರಾಗಾಂಧಿಯ ವಿರುದ್ಧ ಸಾಕ್ಷ್ಯ ನೀಡಿದವರನ್ನು ಚರಣ್ ಸಿಂಗ್‌ರು ತಮ್ಮ ಸರ್ಕಾರದಲ್ಲಿ ಸೇರಿಸಿಕೊಂಡಿದ್ದು, ವಿಶೇಷ ನ್ಯಾಯಾಲಯಗಳನ್ನು ರದ್ದುಪಡಿಸುವುದಿಲ್ಲವೆಂದು ಸ್ಪಷ್ಟವಾಗಿ ಸಾರಿದ್ದು ಮತ್ತು ವಿಶ್ವಾಸ ಮತಪಡೆಯುವವರೆಗೆ ತಾನು ಇಂದಿರಾಗಾಂಧಿಯನ್ನು ಭೇಟಿ ಮಾಡುವುದಿಲ್ಲ ಎಂದು ಚರಣ್ ಸ್ಪಷ್ಟವಾಗಿ ಹೇಳಿದ್ದು—ಇವುಗಳೆಲ್ಲ ಇಂದಿರಾ ಕಾಂಗ್ರೆಸ್ ಮತ್ತು ಜನತಾ (ಎಸ್) ಸರ್ಕಾರದ ನಡುವೆ ಬಿರುಕು ಬಿಡಲಾರಂಭಿಸಿದವು. ಕಾಂಗ್ರೆಸ್ (ಐ)ನ ಷರತ್ತುಗಳಿಗೆ ಒಳಗಾಗುವುದರ ಬದಲು ತಾನು ಮಧ್ಯಕಾಲೀನ ಚುನಾವಣೆಗಳನ್ನು ಎದುರಿಸುವುದಕ್ಕೂ ತಯಾರು ಎಂಬ ಮಟ್ಟಕ್ಕೆ ಹೋಗಿ ಚರಣ್ ಸಿಂಗ್ ಹೇಳಿಕೆಗಳನ್ನು ಇತ್ತಿದ್ದರು.

ಹೀಗೆ ಜನತಾ (ಎಸ್) ನಲ್ಲಿಯೇ ಎರಡು ರೀತಿಯ ಆಲೋಚನೆಗಳು ಬೆಳೆಯತೊಡಗಿದವು. ಜನತಾ (ಎಸ್) ಅಧ್ಯಕ್ಷ ರಾಜ್‌ನಾರಾಯಣ್‌ರು ಇಂದಿರಾ ಪರ ಸ್ವಲ್ಪ ವಾಲುತ್ತಿದ್ದರು; ಚರಣ್ ನೇತೃತ್ವದ ಗುಂಪು ಇಂದಿರಾಗೆ ಶರಣಾಗದ ಹಾಗೆ ಇತ್ತು. ಮತ್ತು ಇತರೆ ಪ್ರಾಂತೀಯ ಪಕ್ಷಗಳ ಹಾಗೂ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ಬೆಂಬಲವನ್ನು ಪಡೆಯಲು ಇಂದಿರಾಗೆ ಶರಣಾಗದ ಗುಂಪು ಪ್ರಯತ್ನ ಶುರು ಮಾಡಿತು.

ಈ ಘಟ್ಟ ಬಂದಾಗ ಮಾತ್ರ ನಮ್ಮ ಪಕ್ಷದ ಪೊಲಿಟ್‌ಬ್ಯೂರೊ ಮತ್ತು ಕೇಂದ್ರ ಸಮಿತಿ ಸೇರಿ ಮುಂಬರಲಿರುವ ವಿಶ್ವಾಸಮತ ವಿಷಯದಲ್ಲಿ ನಮ್ಮ ಧೋರಣೆ ಹೇಗಿರಬೇಕು ಎಂಬುದನ್ನು ಮತ್ತೆ ತೀರ್ಮಾನಿಸಬೇಕಾಯಿತು.

ಚರಣ್ ಸಿಂಗ್ ನೇತೃತ್ವದ ಜನತಾ (ಎಸ್) ಮತ್ತು ಕಾಂಗ್ರೆಸ್(ಎಸ್) ಪಕ್ಷಗಳ ಹೊಸ ಸರ್ಕಾರಕ್ಕೆ ನಮ್ಮ ಬೆಂಬಲ ಕೊಡುವುದರಿಂದ ಸರ್ವಾಧಿಕಾರಿ ವಿರೋಧಿ ಶಕ್ತಿಗಳಿಗೆ ಬಲ ಜಾಸ್ತಿ ಬರುತ್ತದೆಯೆ ಎಂಬ ವಿಷಯವು ಪೊಲಿಟ್ ಬ್ಯೂರೊ ಮತ್ತು ಕೇಂದ್ರ ಸಮಿತಿಯ ಮುಂದೆ ಗಂಭೀರವಾದ ಚರ್ಚೆಗೆ ಬಂದಿತ್ತು ಮತ್ತು ಒಂದು ತೀರ್ಮಾನವನ್ನು ನಾವು ತೆಗೆದುಕೊಳ್ಳಬೇಕಿತ್ತು. ಹೊಸ ಸರ್ಕಾರಕ್ಕೆ ನಮ್ಮ ಎಲ್ಲ ಬೆಂಬಲ ಕೊಡಲು ನಾವು ಕಟ್ಟುಬೀಳದೆ ಕೇವಲ ಆಗಸ್ಟ್ 20ನೇ ತಾರೀಖಿನ 'ವಿಶ್ವಾಸಮತ' ಸಂದರ್ಭದಲ್ಲಿ ಚರಣ್‌ಸಿಂಗ್ ಸರ್ಕಾರಕ್ಕೆ ಬೆಂಬಲಿಸುವುದರಿಂದ ಅದಕ್ಕೆ (ಚರಣ್ ಸರ್ಕಾರಕ್ಕೆ) ಕಾಂಗ್ರೆಸ್(ಐ)ನ ಮೇಲೆ ಅವಲಂಬಿತವಾಗುವುದು ತಪ್ಪುತ್ತದೆಯೆ ಮತ್ತು ಸರ್ವಾಧಿಕಾರಿ ಹಾಗೂ ಕೋಮುವಾದಿ ಎಂಬ ಎರಡು ಅನಿಷ್ಟಗಳ ವಿರುದ್ಧ ಹೋರಾಡಲು ನಮ್ಮ ಬೆಂಬಲವು ನಿರ್ಣಾಯಕ ಪಾತ್ರವಹಿಸುವುದೇ ? ಎಂಬುದು ಪ್ರಶ್ನೆಯಾಗಿತ್ತು.

ಪಕ್ಷದ ಪೊಲಿಟ್ ಬ್ಯೂರೊ ಮತ್ತು ಕೇಂದ್ರ ಸಮಿತಿಯು ಗಂಭೀರ ಚರ್ಚೆಯ ನಂತರ ಮತ್ತು ಚರಣ್ ಸರ್ಕಾರಕ್ಕೆ ಕೊಡಲಾಗುವ ಬೆಂಬಲದ ಸಾಧಕ ಬಾಧಕಗಳನ್ನು ಚೆನ್ನಾಗಿ ಅಭ್ಯಸಿಸಿದ ನಂತರ ಒಂದು ತೀರ್ಮಾನಕ್ಕೆ ಬರಲಾಯಿತು. ವಿಶ್ವಾಸ ಮತದ ಪರವಾಗಿ ನಾವು ಬೆಂಬಲ ಕೊಡುವುದರಿಂದ ಸರ್ವಾಧಿಕಾರಿ ವಿರೋಧಿ ಶಕ್ತಿಗಳನ್ನು ಹೆಚ್ಚು ಬಲಗೊಳಿಸಲು ಸಾಧ್ಯವಾಗುತ್ತದೆ ಎಂಬುದು ಕೇಂದ್ರ ಸಮಿತಿಯ ಹಾಗೂ ಪೊಲಿಟ್ ಬ್ಯೂರೋವಿನ ಅಭಿಪ್ರಾಯವಾಗಿತ್ತು.

ಆಗಸ್ಟ್ 20ರ ಬೆಳಿಗ್ಗೆಯೇ ಚರಣ್ ಸಿಂಗ್ ಅವರು ರಾಜೀನಾಮೆ ಕೊಟ್ಟು, "ತಾನು ಕಾಂಗ್ರೆಸ್(ಐ) ಪಕ್ಷದ ಷರತ್ತುಗಳಿಗೆ ಬಗ್ಗುವುದಿಲ್ಲ" ಎಂದು ಘೋಷಿಸಿದ್ದು ಸಾಮಾನ್ಯ ಸಂಗತಿಯೆಂದೇ ಸಿ. ಪಿ.ಐ.(ಎಂ) ಲೆಕ್ಕಾಚಾರವು ನೂರಕ್ಕೆ ನೂರರಷ್ಟು ಸರಿಯಾಗಿತ್ತು ಎಂಬುದನ್ನು ತೋರಿಸುತ್ತದೆ.

ಈ ಥರಹೆಯ ಸರ್ಕಾರದ ಬಿಕ್ಕಟ್ಟು, ರಾಜಕೀಯ ಬಿಕ್ಕಟ್ಟಿನಲ್ಲಿ ಎಲ್ಲ ರಾಜಕೀಯ ಪಕ್ಷಗಳು ಒಂದು ರೀತಿಯ ಗುರುತರ ಪರೀಕ್ಷೆಗೇ ಒಳಗಾಗಿದ್ದವು. ಚರಣ್ ಸಿಂಗರು ಸರ್ಕಾರ ರಚಿಸಲು ಕಾಂಗ್ರೆಸ್ (ಐ) ಪಕ್ಷವು ಬೇಷರತ್ ಬೆಂಬಲಕೊಡುವುದಾಗಿ ಬಹಿರಂಗವಾಗಿ ಹೇಳಿತು. ಆನಂತರ ಅದು ಕೆಲವು ರಿಯಾಯಿತಿಗಳನ್ನು (ವಿಶೇಷ ನ್ಯಾಯಾಲಯಗಳ ರದ್ದತಿ) ಕೇಳತೊಡಗಿತು. ಮನಸ್ಸಿಗೆ ಬಂದಂತಹ ಎಲ್ಲ ಷರತ್ತುಗಳನ್ನೂ ಹಾಕತೊಡಗಿದ ಕಾಂಗ್ರೆಸ್ (ಐ), ಸಮಯ ಬಂದಾಗ ಎಲ್ಲ ಮಾನ ಮರ್ಯಾದೆಗಳನ್ನೂ ಬಿಟ್ಟು ಜಗಜೀವನ್‌ರಾಮ್ ನೇತೃತ್ವದ ಜನತಾಪಕ್ಷದೊಡನೆ ಸೇರಿಕೊಂಡು ಚರಣ್ ಸರ್ಕಾರವ ರಾಜೀನಾಮೆ ಕೊಡುವಂತೆ ಮಾಡಿತು.

ಕಾಂಗ್ರೆಸ್ (ಐ)ನದ್ದು ಈ ಕಥೆಯಾದರೆ ಕಾಂಗ್ರೆಸ್ (ಎಸ್) ಪಕ್ಷದ್ದು ಮತ್ತೊಂದು ರೀತಿಯ ಕಥೆ. ಕಾಂಗ್ರೆಸ್ (ಎಸ್) ಪಕ್ಷವು, ತಾನು ಚರಣ್ ಸಿಂಗ್ ಮಂತ್ರಿ ಮಂಡಳಕ್ಕೆ ಬೆಂಬಲ ಕೊಡುವುದಾಗಿಯೂ ಮತ್ತು ಮಂತ್ರಿ ಮಂಡಳದಲ್ಲಿ ಮಿತ್ರನಾಗಿಯೂ ಇರುವುದಾಗಿ ಮೊದಲು ಹೇಳಿತು. ನಂತರ ಪ್ರಧಾನ ಮಂತ್ರಿಯ ಸ್ಥಾನ ತನಗೇ ಇರಬೇಕೆಂದು ಕೇಳಲು ಶುರುಮಾಡತೊಡಗಿತು ! ತನ್ನ ಪಕ್ಷದ ಸಂಸತ್ ಸದಸ್ಯರನ್ನು ಸಮಾಲೋಚಿಸದೆ, ತನ್ನದೇ ಪಕ್ಷದ ರಾಷ್ಟ್ರೀಯ ಕಾರ್ಯಕಾರಿ ಸಮಿತಿಯೊಡನೆ ಮಾತುಕತೆ ನಡೆಸದೆ ಕಾಂಗ್ರೆಸ್ (ಎಸ್) ಪಕ್ಷವು ತನ್ನ ಪಾರ್ಲಿಮೆಂಟರಿ ಕಮಿಟಿಯ ಎಲ್ಲ ಸದಸ್ಯರನ್ನೂ ಮಂತ್ರಿ ಮಂಡಳಕ್ಕೆ ಶಿಫಾರಸು ಮಾಡಿತು. ಪ್ರಜಾಸತ್ತಾತ್ಮಕವಲ್ಲದ ಅವರ ಈ ಕ್ರಮಕ್ಕೆ ಅವರ ಪಕ್ಷದಿಂದಲೇ ವಿರೋಧ ಬಂದು ಪಕ್ಷದ ಸದಸ್ಯರು ಬಂಡಾಯವೆದ್ದರು. ಇದು ಅವರ ಪಕ್ಷದ ಒಳಗಡೆ ಆಂತರಿಕ ಬಿಕ್ಕಟ್ಟಿಗೆ ಆಸ್ಪದ ಕೊಟ್ಟಿತು. ಮಂತ್ರಿಸ್ಥಾನಗಳಿಗೆ ಕಚ್ಚಾಡುತ್ತಿದ್ದ ಇವರನ್ನು ಕಂಡು ಸಾರ್ವಜನಿಕರು ನಗುವಂತಾಗಿ ಕಾಂಗ್ರೆಸ್ (ಎಸ್)ಗೆ ಅಪಮಾನವಾಯಿತು. ಕಡೆಗೆ ಪಕ್ಷವೇ ಒಡೆದು ಹೋಗುವ ಸ್ಥಿತಿಗೆ ಬಂದು ಮಂತ್ರಿಗಳಾಗಿದ್ದವರೆಲ್ಲ ಪಕ್ಷದ ಅಧ್ಯಕ್ಷರಾದ ಸ್ವರಣ್ ಸಿಂಗ್‌ರಿಗೆ ರಾಜೀನಾಮೆ ಪತ್ರ ಸಲ್ಲಿಸಿದರು.

1979ರ ಜುಲೈ 18ರಂದು ಹೊರಡಿಸಲಾಗಿದ್ದ ಐದು ಎಡ ಪಕ್ಷಗಳ ಸಂಯುಕ್ತ ಪತ್ರಿಕಾ ಹೇಳಿಕೆಗೆ ಸಹಿ ಹಾಕಿದ್ದ ಬಲ ಕಮ್ಯುನಿಸ್ಟ್ ಪಕ್ಷವು ಜನತಾ(ಎಸ್) ಮತ್ತು ಕಾಂಗ್ರೆಸ್ (ಎಸ್) ಪಕ್ಷಗಳ ಸಮ್ಮಿಶ್ರ ಸರ್ಕಾರ ರಚನೆಗೆ ಸಂಪೂರ್ಣ ಬೆಂಬಲ ಕೊಟ್ಟು ಸರ್ಕಾರದ ಕಡೆಗೆ ನಿಂತಿತು ! ಸರ್ಕಾರ ರಚಿಸಲು ಚರಣ್ ಸಿಂಗ್‌ರು ಸಲ್ಲಿಸಿದ್ದ ಪಟ್ಟಿಯಲ್ಲಿ ಇಂದಿರಾ ಕಾಂಗ್ರೆಸ್ ಪಕ್ಷದ ಹೆಸರುಗಳಿದ್ದಾಗ್ಯೂ ಬಲ ಕಮ್ಯುನಿಸ್ಟರು ಒಂದು ಚೂರೂ ಪ್ರತಿಭಟಿಸಲಿಲ್ಲ. ಆದರೆ ಇವರು ಸಹಿ ಹಾಕಿ-ಘೋಷಣೆ ಕೂಗಿದ್ದು ಮಾತ್ರ "ಕೋಮು ವಿರೋಧಿ-ಸರ್ವಾಧಿಕಾರಿ ವಿರೋಧಿ ಸರ್ಕಾರ ರಚಿಸುವವರಿಗೆ ನಮ್ಮ ಬೆಂಬಲ" ಎಂದು. ಬಲ ಕಮ್ಯುನಿಸ್ಟ್ ಕಾರ್ಯದರ್ಶಿ ಹೇಳಿದರು: "ಜನತಾ ಸರ್ಕಾರವನ್ನು ಕೆಡುವಿ ಅದರ ಎಲ್ಲ ಘಟಕಗಳನ್ನು ನಾಶಮಾಡುವುದೇ ನಮ್ಮ ಗುರಿಯಾಗಿತ್ತು. ಆದ್ದರಿಂದ ಚರಣ್ ಸಿಂಗ್‌ರಿಗೆ ಬೆಂಬಲ ಕೊಟ್ಟೆವು" ಎಂಬುದಾಗಿ. ಆದರೆ ಸರ್ವಾಧಿಕಾರಿ ಇಂದಿರಾಗಾಂಧಿಯನ್ನು ಸೋಲಿಸುವುದರಲ್ಲಿ ಜನತಾಪಕ್ಷವು ಪಟ್ಟ ಶ್ರಮವನ್ನು ಸಿ.ಪಿ.ಐ. ಮೆಚ್ಚಲಿಲ್ಲ.

ಜುಲೈ 18ರ ವಾಮಪಕ್ಷಗಳ ಸಂಯುಕ್ತ ಹೇಳಿಕೆಗೆ ಸಹಿ ಹಾಕಿದ್ದ ಮತ್ತೆರಡು ವಾಮಪಕ್ಷಗಳು 18ರ ಒಪ್ಪಂದಕ್ಕೆ ಯಾವ ಗೌರವವನ್ನೂ ಕೊಡದೆ ಚರಣ್ ಸರ್ಕಾರದ ವಿರುದ್ಧ ಸಮರ ಘೋಷಿಸಿದವು ಮತ್ತು ಜಗಜೀವನ್‌ರಾಮ್ ನೇತೃತ್ವಕ್ಕೂ ವಿರೋಧ ವ್ಯಕ್ತಪಡಿಸಿದವು.

[8ನೇ ಪುಟ ನೋಡಿ]

# ........ಕೇಂದ್ರ ಸಮಿತಿಯ ನಿರ್ಣಯದ ಬಗ್ಗೆ

[7ನೇ ಪುಟದಿಂದ]

ಕೊನೆಯ ಗಳಿಗೆಯವರೆಗೂ ಮುರಾರ್ಜಿ ದೇಸಾಯಿಗೆ ಬೆಂಬಲ ಕೊಟ್ಟುಕೊಂಡು ಬಂದ ಅಣ್ಣಾ ಡಿ.ಎಂ.ಕೆ. ಪಕ್ಷವು ಚರಣ್ ಸಿಂಗ್ ಪರವಾಗಿ ವಾಲಿತು ಮಾತ್ರವಲ್ಲ ಚರಣ್ ಮಂತ್ರಿಮಂಡಲಕ್ಕೂ ಸೇರಿತು!

ಈ ಎಲ್ಲ ಪಕ್ಷಗಳಂತೆ ವರ್ತಿಸದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಒಂದು ತತ್ವನಿಷ್ಠವಾದ ನಿಲುವನ್ನು ತೆಗೆದುಕೊಂಡಿತು. ಸರ್ವಾಧಿಕಾರ ಮತ್ತು ಕೋಮುವಾದವನ್ನು ಪ್ರತಿನಿಧಿಸುವ ಇಂದಿರಾ ಕಾಂಗ್ರೆಸ್ ಹಾಗೂ ಆರ್. ಎಸ್. ಎಸ್.-ಜನಸಂಘ ಹಿಡಿತದ ಜನತಾಪಕ್ಷದ ವಿರುದ್ಧ ಹೋರಾಡಲು ಸಿ. ಪಿ. ಐ. (ಎಂ) ನಿಂತಿತು. ತಲೆಚಿಟ್ ಎನ್ನುವಂತಹ ಪ್ರಕ್ಷುಬ್ಧ ರಾಜಕೀಯ ಬಿಕ್ಕಟ್ಟು. ಇಂತಹ ಬಿಕ್ಕಟ್ಟಿನ ಪ್ರತಿ ಹೆಜ್ಜೆಯಲ್ಲೂ ಸಿ. ಪಿ. ಐ. (ಎಂ.) ನದ್ದು ತತ್ವನಿಷ್ಠ ನಿಲುವು.ಆರ್.ಎಸ್.ಎಸ್-ಜನಸಂಘದ ಹಿಡಿತದ ಜನತಾದ ವಿರುದ್ಧ ಹೋರಾಡಿ ಕೋಮು.ವಾದ ನಿರ್ನಾಮ ಹಾಗೂ ಜಾತ್ಯತೀತತೆಯ ರಕ್ಷಣೆಗೆ ಮಾರ್ಕ್ಸಿಸ್ಟರು ಸೆಣಸಿದರು. ಇಂದಿರಾ ಸರ್ವಾಧಿಕಾರದ ವಿರುದ್ಧ ಹೋರಾಡಿ ಪ್ರಜಾಸತ್ತೆಯ ರಕ್ಷಣೆಗೂ ಸಿ.ಪಿ.ಐ. (ಎಂ.) ಕಾದ್ಭಾಡಬೇಕಾಯಿತು. ಈ ನಿಟ್ಟಿನಲ್ಲೇ ನಮ್ಮ ಪಕ್ಷ ಹೆಜ್ಜೆ ಇಟ್ಟದ್ದು ಇಂತಹದೊಂದು ತತ್ವಬದ್ಧ ಹೋರಾಟವನ್ನು ಮಾಡಿದ್ದು ನಮ್ಮ ಪಕ್ಷ ಮಾತ್ರ. ಎಂತಹವರನ್ನೂ ಗಲಿಬಿಲಿ ಮಾಡುವಂತಹ ಕಲುಷಿತ ರಾಜಕೀಯ ವಾತಾವರಣದಲ್ಲಿ ಎಚ್ಚರಿಕೆಯ ಹೆಜ್ಜೆಗಳನ್ನಿಟ್ಟವರು ನಾವು. ನಿರಂತರ ಎಚ್ಚರಿಕೆಯಿಂದ ಇತರೆಯವರನ್ನು ಸೇರಿಸಿಕೊಂಡು ನಾವು ಹೋರಾಡಿದ್ದರ ಫಲವೇನು? ನಮ್ಮ ಹೋರಾಟಕ್ಕೆ ಖಂಡಿತ ಫಲ ಸಿಕ್ಕಿದೆ.

ಇಂದಿರಾ ಸರ್ವಾಧಿಕಾರದ ವಿರುದ್ಧ ಆರ್. ಎಸ್. ಎಸ್.-ಜನಸಂಘದ ಕೋಮುವಾದದ ವಿರುದ್ಧ ಹೋರಾಡುವ ಶಕ್ತಿಗಳು ಈಗ ನಿಜವಾಗಿ ನುತ್ತು ಪ್ರಚ್ಛನ್ನವಾಗಿ ಮೇಲೆದ್ದಿವೆ. ಅವುಗಳ ಶಕ್ತಿ ಹತ್ತುಪಟ್ಟು ಹೆಚ್ಚಾಗಿ ಅವಕ್ಕೀಗ ಭೀಮಬಲ ಬಂದಿದೆ. ಜನಪರವಾದ ಈ ಶಕ್ತಿಗಳಿಗೆ ಸಂಸತ್ತಿನ ಒಳಗೂ ಬಲ ಹೆಚ್ಚಾಗಿದೆ-ಹೊರಗಡೆ ಜನಕೋಟಿಯ ನಡುವೆಯೂ ಅವರು ಬಲಶಾಲಿಗಳಾಗುತ್ತಿದ್ದಾರೆ.

ತಾನು ಕೋಮುವಾದಿ ಶಕ್ತಿಗಳ ವಿರೋಧಿ ಎಂದು ಬಡಾಯಿ ಕೊಚ್ಚಿಕೊಳ್ಳುತ್ತಲಿದ್ದ ಕಾಂಗ್ರೆಸ್ (ಐ) ಪಕ್ಷದ ನಿಜವಾದ ಬಣ್ಣ ಈಗ ಬಯಲಾಗಿದೆ. ಬಿಹಾರದಲ್ಲಿ ಅದು ಆರ್.ಎಸ್.ಎಸ್. ಹಿಡಿತದ ಸರಕಾರದ ಪರ ನಿಂತಿದ್ದು ಕೇಂದ್ರದಲ್ಲಿ ಅವರು ಆರ್.ಎಸ್.ಎಸ್. ಹಿಡಿತದ ಜಗಜೀವನರಾಮ್ ನೇತೃತ್ವದ ಜನತಾಪಕ್ಷದೊಡನೆ ಸೇರಿ ಚರಣ್ ಸರ್ಕಾರವನ್ನು ಸೋಲಿಸಿದ್ದನ್ನು ಜನ ತಮ್ಮ ಕಣ್ಣಾರೆಯೇ ಕಂಡಿದ್ದಾರೆ. ಇದರಿಂದಾಗಿ ಕಾಂಗ್ರೆಸ್ (ಐ) ಪಕ್ಷವು ಈಗ ರಕ್ಷಣಾತ್ಮಕ ಹೋರಾಟಕ್ಕೆ ಇಳಿಯಬೇಕಾದ ಸ್ಥಿತಿಗೆ ಬಂದಿದೆ.

ಕಳೆದ 28 ತಿಂಗಳಿನಿಂದ ಪ್ರತಿಯೊಂದು ಜಾತ್ಯತೀತ ಶಕ್ತಿಗಳ ವಿರುದ್ಧ, ಮೇಲೆಬಿದ್ದು ಹೋರಾಟ ಮಾಡಿಕೊಂಡು ಬಂದು ದಿನೇ ದಿನೇ ಶಕ್ತಿಶಾಲಿಯಾಗುತ್ತಿದ್ದ ಆರ್. ಎಸ್. ಎಸ್.-ಜನಸಂಘೀ ಶಕ್ತಿಗಳು ಇಂದು ಕೇಂದ್ರದಲ್ಲಿ ಅಧಿಕಾರಕಳೆದುಕೊಂಡಿವೆ. ಮತ್ತು ಈ ಜಾತ್ಯಾಂಧ ಹಾಗೂ ಮತಾಂಧ ಶಕ್ತಿಗಳೂ ಸಹ ರಕ್ಷಣಾತ್ಮಕ ಹೋರಾಟಕ್ಕೆ ಇಳಿಯುವಂತಹ ಸ್ಥಿತಿ ಈಗ ಇದೆ.

ಕಳೆದ 6 ವಾರಗಳಲ್ಲಿನ ಕಲುಷಿತ ರಾಜಕೀಯ ವಾತಾವರಣದಲ್ಲಿ ಸಿ. ಪಿ. ಐ.(ಎಂ.) ತಳೆದ ನಿಲುವೊಂದೇ ಸರಿಯಾದ ನಿಲುವಾಗಿತ್ತು ಎಂಬುದನ್ನು ಈ 6 ವಾರಗಳ ಬದುಕು ಮತ್ತು ಚರಿತ್ರೆಯು ತೋರಿಸಿಕೊಟ್ಟಿದೆ. ನಮ್ಮ ಪಕ್ಷದ ಬಗ್ಗೆ ಜನರಲ್ಲಿ ಅನುಮಾನ ಉಂಟುಮಾಡಲು ಬೂರ್ಜ್ವಾ ಪತ್ರಿಕೆಗಳು ಎಷ್ಟೇ ಪ್ರಯತ್ನಪಟ್ಟರೂ ಅವರ ಪ್ರಯತ್ನವನ್ನು ಜನತೆ ಅರ್ಥಮಾಡಿಕೊಳ್ಳಬಲ್ಲರೆಂಬ ವಿಶ್ವಾಸ ನಮ್ಮದು.

ನಮ್ಮ ಪಕ್ಷದ ಒಳಗಡೆ ತೀವ್ರ ರೀತಿಯ ಆಂತರಿಕ ಭಿನ್ನಾಭಿಪ್ರಾಯಗಳಿವೆ ಮತ್ತು ಪಕ್ಷವು ಜನತೆಯಿಂದ ಕಣ್ಮರೆಯಾಗುತ್ತದೆ,ಎಂದೆಲ್ಲಾ ನಮ್ಮ ವಿರುದ್ಧ ಅಪಪ್ರಚಾರ ಮಾಡಿದವರಿಗೆ ಮುಖಭಂಗ ಉಂಟಾಗುವುದರಲ್ಲಿ ಸಂದೇಹವೇ ಇಲ್ಲ. ಯಾಕೆಂದರೆ, ನಮ್ಮನ್ನು ಕುರಿತು ಅವರು ಹೇಳಿರುವ ಭವಿಷ್ಯಗಳೆಲ್ಲ ಸುಳ್ಳಾಗುತ್ತವೆ. ನಮ್ಮ ಮೇಲಿನ ಅಪಪ್ರಚಾರಕ್ಕೆ ಅವರು ಕೊಟ್ಟಿರುವ ಕಾರಣಗಳೆಲ್ಲ ಬರೀ ಸುಳ್ಳು ಕಾರಣಗಳು ಹಾಗೂ ಆಧಾರರಹಿತವಾದವು.

ಆದರೆ ನಮ್ಮ ಪಕ್ಷದಲ್ಲಿ ಆಂತರಿಕ ಬಿಸಿ ಚರ್ಚೆ ನಡೆಯಲೇ ಇಲ್ಲ ಎಂದು ನಾವೇನೂ ಹೇಳಿಕೊಳ್ಳುವುದಿಲ್ಲ. ನಮ್ಮ ಪಕ್ಷದಲ್ಲಿ ಯಾವಾಗಲೂ ಬಿಸಿ ಚರ್ಚೆ ನಡೆದೇ ಇದೆ. ಯಾಕೆಂದರೆ ನಮ್ಮದು ಆಂತರಿಕ ಪ್ರಜಾಸತ್ತೆಯನ್ನು ಕಾಯ್ದುಕೊಂಡು ಬಂದ ಪಕ್ಷ.

ಜನ ಸಮಸ್ಯೆಗಳಿಗೆ ವಿವಿಧ ಆಯಾಮಗಳಿಂದ ಸ್ಪಂದಿಸುವ ಪಕ್ಷ. ಅವಕಾಶಗಳು ಬಂದಾಗ ಧೈರ್ಯವಾಗಿ ಮುನ್ನುಗ್ಗುವ ಪಕ್ಷ ಮತ್ತು ಜೀವಂತ ಪಕ್ಷ. ಈ ಗುಣಗಳಿಂದಾಗಿಯೇ ನಮ್ಮ ಪಕ್ಷದ ಸಭೆಗಳಲ್ಲಿ ಬಿಸಿ ಚರ್ಚೆಯು ಹಾಗೂ ಖಾರವಾದ ವಿಮರ್ಶೆಯು ಯಾವಾಗಲೂ ಇರುತ್ತದೆ. ಆದರೆ ನಮ್ಮ ಪಕ್ಷವು ಮಾತ್ರ ತನ್ನ ಸದಸ್ಯರು ಅವರ ಭಿನ್ನಾಭಿಪ್ರಾಯಗಳನ್ನು ಬಹಿರಂಗವಾಗಿ ಹೇಳುವುದನ್ನು ನಿಷೇಧಿಸಿದೆ.

ನಮ್ಮನ್ನು ಟೀಕೆ ಮಾಡುವವರು ಒಂದು ಪಕ್ಷ ಪ್ರಾಮಾಣಿಕರಾಗಿದ್ದಲ್ಲಿ, ನಾವು ನಡೆದು ಬಂದಿರುವ ಅನುಭವದ ದಾರಿಯನ್ನು ನೋಡಿ ನಮ್ಮನ್ನು ತೂಗಿ ನೋಡಲಿ. ಹೀಗೆ ನೋಡಿದಾಗ, ನಮ್ಮನ್ನು ಸರ್ವಾಧಿಕಾರಿ ಇಂದಿರಾ ಕಾಂಗ್ರೆಸ್ಸಿಗೆ ಸೋತವರು ಎಂದು ಟೀಕಿಸಲು ನಮ್ಮ ಟೀಕಾಕಾರರಿಗೆ ಧೈರ್ಯ ಬರುತ್ತದೆಯೆ?

ಪ್ರಜಾಸತ್ತಾತ್ಮಕ ಶಕ್ತಿಗಳು ಒಂದು ಪಕ್ಷ ನಿಶ್ಶಕ್ತಿಗೊಂಡವು ಎಂದೇನಾದರೂ ಆರೋಪಿಸಬೇಕಾದರೆ ಆ ಆರೋಪವನ್ನೆಲ್ಲಾ ಜನತಾಪಕ್ಷದ ನಾಯಕರ ಮೇಲೆ ಸಂಪೂರ್ಣವಾಗಿ ಹೊರಿಸಲೇಬೇಕಾಗುತ್ತದೆ. ಯಾಕೆಂದರೆ ಸರ್ವಾಧಿಕಾರಿ ಇಂದಿರಾಗಾಂಧಿಯ ಜೊತೆಗೆ ರಾಜಿ ಮಾಡಿಕೊಂಡವರು ಈ ನಾಯಕರುಗಳೇ. ಈ ಜನತಾ ನಾಯಕರು ಅಧಿಕಾರಶಾಹಿ ಗುಣಗಳನ್ನು ಸ್ವಯಂ ತಾವೇ ಬೆಳೆಸಿಕೊಂಡರು. ಆರ್. ಎಸ್. ಎಸ್.-ಜನಸಂಘದ ಕೈಗೆ ಜನತಾ ಪಕ್ಷವನ್ನೇ ಕೊಟ್ಟು ಪಕ್ಷವನ್ನು ಅವರ ಕೈನ ಆಟದ ಬೊಂಬೆಯನ್ನಾಗಿ ಮಾಡಿದವರು ಈ ಜನತಾ ನಾಯಕ ಶಿರೋಮಣಿಗಳೇ. ಜನತಾಪಕ್ಷದ ಈ ನಾಯಕ ಮಣಿಗಳಿಂದಲೇ ಆ ಪಕ್ಷವು ಅಡ್ಡಿ ಆತಂಕಗಳ ಒಂದು ದೊಡ್ಡ ಕೇಡಾಯಿತು-ಕ್ರಮೇಣ ಅದು ಜನತೆಯಿಂದ ದೂರವಾಗತೊಡಗಿತು.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವೂ ಸೇರಿದಂತೆ ಎಲ್ಲಾ ರಾಜಕೀಯ ಪಕ್ಷಗಳ ರಾಜಕೀಯ ನಡವಳಿಕೆಯನ್ನು ಸುದ್ದಿ ಪತ್ರಿಕೆಗಳ ಸಾಮಾನ್ಯ ಓದುಗರು ಮತ್ತು ಸಾಮಾನ್ಯ ಜನತೆ ತಕ್ಷಣದಲ್ಲಿ ಸುಲಭವಾಗಿ ಅರ್ಥ ಮಾಡಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ ಎಂಬುದು ಸತ್ಯ. ಶ್ರೇಷ್ಠ ಕ್ರಾಂತಿಕಾರಿ ಲೆನಿನ್ ಅವರ ಮಾತಿನಲ್ಲಿ ಹೇಳುವುದಾದರೆ "ಜನತೆಯು ಎಲ್ಲವನ್ನೂ ಅವರ ಅನುಭವಗಳ ಪಾಠದ ಮೂಲಕವೇ ಕಲಿಯುತ್ತಾರೆ. ಮತ್ತು ಅವರು ಕಲಿಯುವಾಗ ಪ್ರತಿಯೊಂದು ಪಾಠಕ್ಕೂ ಸಾಕಷ್ಟು ಬೆಲೆಯನ್ನು ತೆರುತ್ತಾರೆ" ಹಾಗೆಯೇ ಕಳೆದ 6 ವಾರಗಳ ಕಾಲದ ರಾಜಕೀಯ ಬಿಕ್ಕಟ್ಟಿನ ಪಾಠವನ್ನು ಭಾರತದ ಜನಕೋಟಿಯೂ ಕಲಿಯುತ್ತದೆ. ಈ ದಿಸೆಯಲ್ಲಿ ಅವರು ಪ್ರತಿಯೊಂದು ರಾಜಕೀಯ ಪಕ್ಷವನ್ನೂ ತೂಗಿನೋಡುತ್ತಾರೆ. ನಂತರ ಅವರು ತಮ್ಮ ತೀರ್ಪನ್ನು ಕೊಟ್ಟೇ ತೀರುತ್ತಾರೆ.

ಪ್ರಸಕ್ತ ರಾಜಕೀಯ ಬಿಕ್ಕಟ್ಟಿನಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ತಳೆದ ನಿಲುವೆಯು ತತ್ವಭ್ರಷ್ಟವಾಗಿತ್ತು ಎಂಬ ಬೂರ್ಜ್ವ ಪತ್ರಿಕೆಗಳ ಟೀಕೆಗಳು ಮುಂತಾದವುಗಳನ್ನು ಜನತೆ ಇತಿಹಾಸದ ಕಸದ ಬುಟ್ಟಿಗೆ ಎಸೆಯುವುದರಲ್ಲಿ ಸಂಶಯವಿಲ್ಲ. ○

# ಡಿ.ಎಫ್.ಎ. ಕಾರ್ಮಿಕರ ಅರಣ್ಯರೋಧನ

[ಒಂದನೇ ಪುಟದಿಂದ]

ಗಿಲ್ಲ; ಮಾಲಿಕರ ಪತಿಯಿಂದ ಹಾಜರಿದ್ದ ಕಾಯ್ದೆ ಪಂಡಿತರುಗಳು ಬೀಗಮುದ್ರೆಯನ್ನು ಎತ್ತಲು ನಿರಾಕರಿಸಿದ್ದಾರೆ. ಇಷ್ಟಾದರೂ ಲಾಕ್ ಔಟನ್ನು ಪ್ರತಿಬಂಧಿಸಲು ಒಪ್ಪದಿರುವುದು ಸರಕಾರವು ತೆರೆಯ ಮರೆಯಲ್ಲಿ ಬಂಡವಾಳಶಾಹಿಗಳಿಗೆ ರಕ್ಷಣೆ ಮಾಡುವುದಕ್ಕೆ ದೃಷ್ಟಾಂತವಾಗಿದೆ.

ಸರಕಾರದ ಧೋರಣೆಯಿಂದ ಮಾಲಕರು ಇನ್ನೂ ಹೆಚ್ಚಿನ ಕುತಂತ್ರಗಳನ್ನು ನಡೆಸಿದ್ದಾರೆ. ಎಲ್ಲಾ 238 ಕೆಲಸಗಾರರ ಮೇಲೆ ಕ್ರಿಮಿನಲ್ ದಾವೆಗಳನ್ನು ಹೂಡಿ ಒಗ್ಗಟ್ಟು ಮತ್ತು ಹೋರಾಟವನ್ನು ಸದೆಬಡಿಯಲು ಮುಂದಾಗಿದ್ದಾರೆ. ಹಳಿಯಾಳದ ಮ್ಯಾಜಿಸ್ಟ್ರೇಟರು (J. M. F. E.) ಈ ಎಲ್ಲಾ ಕಾರ್ಮಿಕರಿಗೂ, ಅವರ ಮುಖಂಡರೂ ದಾಂಡೇಲಿಯ ಪುರಸಭಾ ಅಧ್ಯಕ್ಷರೂ ಆದ ಕಾಂ. ಆರ್. ಜಿ. ಸ್ಥಳೇಕರ್ ಇವರಿಗೂ ದಾಂಡೇಲಿಯಿಂದ 15 ಕಿ. ಮಿ. ದೂರ ಹೋಗುವಂತೆ ಆಜ್ಞೆ ಹೊರಡಿಸಿದ್ದಾರೆ. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ಸಮಿತಿ ಸದಸ್ಯರೂ, ದಾಂಡೇಲಿಯ ಪ್ರಥಮ ನಾಗರೀಕರೂ ಆದ ಕಾಂ. ಸ್ಥಳೇಕರರು ದಾಂಡೇಲಿಯನ್ನೆ ಬಿಟ್ಟು ಹೊರಗೆ ಹೋಗಬೇಕೆಂಬ ಮ್ಯಾಜಿಸ್ಟ್ರೇಟರ ಆಜ್ಞೆ ಇಡೀ ಜನತೆಯನ್ನೆ ಚಕಿತಗೊಳಿಸಿದೆ. ಸತತವಾಗಿ ಕಾನೂನು ಭಂಗ ಮಾಡುವ ಮಾಲಕರ ಮೇಲೆ ಏನೂ ಕ್ರಮ ವಹಿಸದೆ, ಕಾರ್ಮಿಕರ ನ್ಯಾಯವಾದ ಹೋರಾಟಗಳನ್ನು ಸದೆಬಡಿಯುವುದರಲ್ಲಿ ಸರಕಾರ, ಕಾನೂನು ಮತ್ತು ಮಾಲಕರು ಒಂದಾಗಿವೆ.

ಡಿ. ಎಫ್. ಎ. ಕೆಲಸಗಾರರ ಈ ಹೋರಾಟವು ದಾಂಡೇಲಿಯ ಅರಣ್ಯದಲ್ಲಿ ನಡೆದಿದ್ದು, ಅದು ಅರಣ್ಯರೋಧನವಾಗಿ ಉಳಿಯುವಂತೆ ಮಾಲಕರು, ಸರಕಾರ ಮತ್ತು ಇತರ ಹಿತಾಸಕ್ತಿಗಳು ನಡೆಸಿರುವ ಪ್ರಯತ್ನವನ್ನು ವಿಫಲಗೊಳಿಸದಿದ್ದರೆ ಕಾರ್ಮಿಕ ವರ್ಗಕ್ಕೆ ದೊಡ್ಡ ಗಂಡಾಂತರವಿದೆ. ರಾಜ್ಯದ ಮತ್ತು ರಾಷ್ಟ್ರದ ಕಾರ್ಮಿಕ ವರ್ಗವು ಇದನ್ನು ಅರಿತುಕೊಂಡು, ಡಿ.ಎಫ್.ಎ. ಕೆಲಸಗಾರರ ಹೋರಾಟಕ್ಕೆ ಬೆಂಬಲವೀಯಬೇಕಾಗಿದೆ. ರಾಜ್ಯದಲ್ಲಿ ಪ್ರತಿ ಕಾರ್ಖಾನೆಗಳಲ್ಲೂ ಪ್ರತಿಭಟನೆಯ ಧ್ವನಿ ಮೊಳಗಿಸಬೇಕಾಗಿದೆ. ○

# ಪರಿಸರ

ರಾಜನಾರಾಯಣರು ಗಡ್ಡ ಇರಿಸಿಕೊಂಡರೆ ದೇಶಕ್ಕೆ ಬಂದ ಭಾಗ್ಯ ಏನು? ಅದನ್ನು ತೆಗೆಸಿದರೆ ದೇಶಕ್ಕೆ ಆದ ನಷ್ಟ ಏನು? ಪತ್ರಿಕೆಗಳು ಬರೆಯುವುದಕ್ಕೆ ಜನರು ಓದುವುದಕ್ಕೆ ಬೇರೆ ವಿಷಯಗಳಿಲ್ಲವೇನು?

—"ಪ್ರಪಂಚ"ದಲ್ಲಿ ಪಾಟೀಲ್ ಪುಟ್ಟಪ್ಪ

ವಿದ್ಯಾರ್ಥಿಗಳ ಅಂಕ ಪಟ್ಟಿಯಲ್ಲಿ ದೋಷ ಇರುವುದರ ಬಗ್ಗೆ ಎಸ್. ಎಫ್. ಐ. ಬಿಟ್ಟು ಬೇರೆ ಯಾವ ವಿದ್ಯಾರ್ಥಿ ಸಂಘಟನೆಗಳು ಗಮನ ಹರಿಸಿದಂತಿಲ್ಲ.

—"ಪ್ರಜಾವಾಣಿ"ಯಲ್ಲಿ ವಿಶೇಷ ವರದಿ

ಬೆಂಗಳೂರು ವಿ. ವಿ. ಯ ಉಪಕುಲಪತಿಗಳ ತೀರ್ಮಾನಗಳೆಲ್ಲಾ ಕಾನೂನಿಗೆ ವಿರೋಧವಾಗಿದೆ ಎಂದು ಹೈಕೋರ್ಟ್ ಸಾರಿದೆ. ವಿ. ವಿ. ಯು ಸೋತ ಪ್ರತಿವಾದಿಯಾಗಿ ಹಣ, ಗೌರವ ಮತ್ತು ಪ್ರತಿಷ್ಠೆಯನ್ನು ಕಳೆದುಕೊಳ್ಳುತ್ತಿದೆ. ಆದರೆ ಇದರ ಬಗ್ಗೆ ಉಪಕುಲಪತಿಗಳಿಗೆ ಸ್ವಲ್ಪವಾದರೂ ನಾಚಿಕೆ ಇಲ್ಲ. ಆತ್ಮಗೌರವ ಇರುವ ಬೇರೆ ಯಾವನೇ ವ್ಯಕ್ತಿ ರಾಜೀನಾಮೆ ಕೊಟ್ಟು ಹೋಗುತ್ತಿದ್ದರು.

—ಎಸ್.ಎಫ್.ಐ. ಬೆಂಗಳೂರು ಶಾಖೆ ಹೊರಡಿಸಿರುವ ಕರಪತ್ರದಲ್ಲಿ

# ದಿ. ಮಾರುತಿ ಗಣೇಶ ಪವಾರ್ ನಿಧಿ

ಹಳಿಯಾಳ ಪೋಲೀಸ್ ಗೋಲಿಬಾರ್‌ನಲ್ಲಿ ಮೃತರಾದ ದಿವಂಗತ ಮಾರುತಿ ಗಣೇಶ ಪವಾರ್ ನಿಧಿ ಸಂಗ್ರಹವನ್ನು ತುರ್ತಾಗಿ ನಡೆಸಿ, ಸಂಗ್ರಹವಾದ ಹಣವನ್ನೂ, ಉಳಿಕೆಯಾದ ಕೂಪನ್ನುಗಳನ್ನೂ ಪ್ರಾಂತ ರೈತಸಂಘದ ಕೇಂದ್ರಕ್ಕೆ ಸೆಪ್ಟೆಂಬರ್ 15ರೊಳಗೆ ರೈತಸಂಘದ ಎಲ್ಲಾ ಘಟಕಗಳೂ ಕಳುಹಿಸಿಕೊಡಬೇಕಾಗಿ ಕೋರುತ್ತೇವೆ.

ಎಚ್. ಮುಗವಾಳಪ್ಪ
ಅಧ್ಯಕ್ಷ, ಪ್ರಾಂತ ರೈತಸಂಘ

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist). Karnataka State Committee, L-56, K. V. Temple Street, Sultanpet, Bangalore-560 053.
Editorial and managerial office : L-56, K. V. Temple Street, Sultanpet, Bangalore-560 053. Phone : 24154
EDITOR : M. K. BHAT